**ಸಂಪಾದಕ ಸಮಿತಿ**


| | |
|---|---|
| ಎಸ್. ಸೋಮಸುಂದರ | ಪ್ರಧಾನ ಸಂಪಾದಕ |
| ವಿ. ಎಸ್. ಮಣಿ | ಸದಸ್ಯರು |
| ಸುಬ್ರಹ್ಮಣ್ಯಂ. ಬಿ. | ಸದಸ್ಯರು |
| ಶ್ರೀಮತಿ ಲಲಿತ ರಮೇಶ | ಸದಸ್ಯರು |
| ಕೆ.ಸಿ. ನಟರಾಜನ್ | ಸಂಪಾದಕ |


# ಬೃಹಚ್ಚರಣ

**ಸಂಘದ ಸದಸ್ಯರಾಗಿ**

| | |
|---|---|
| ಮಹಾ ಪೋಷಕರು | – 25,000/- |
| ಪೋಷಕರು | – 5,000/- |
| ಸದಸ್ಯತ್ವ | – 1,000/- |
| ವಾರ್ಷಿಕ ನಿರ್ವಹಣೆ | – 500/- |


ಸಂಪುಟ : 6 ಸಂಚಿಕೆ : 3 ತ್ರೈಮಾಸಿಕ ವಾರ್ತಾ ಪತ್ರ ಖಾಸಗಿ ಪ್ರಸಾರಕ್ಕಾಗಿ ಜುಲೈ–ಸೆಪ್ಟೆಂಬರ್ 2016



## ಅರ್ಪಣೆ

ಈ ಸಂಚಿಕೆಯನ್ನು ಬೃಹಚ್ಚರಣ ಸಮುದಾಯದ ಅಗಲಿದ ಗುರುವೃಂದಕ್ಕೆ ಶ್ರದ್ಧೆ ಹಾಗೂ ಗೌರವ ಗಳಿಂದ ಅರ್ಪಿಸಲಾಗಿದೆ

## ಅಧ್ಯಕ್ಷರ ನುಡಿ

ಬೃಹಚ್ಚರಣ ಬಂಧುಗಳಿಗೆ ನಮಸ್ಕಾರ. ದೀಪಾವಳಿ ಹಾಗೂ ಕನ್ನಡ ರಾಜ್ಯೋತ್ಸವ ಸಂದರ್ಭದಲ್ಲಿ ಸಂಘದ ಪರವಾಗಿ ತಮಗೂ, ತಮ್ಮ ಕುಟುಂಬಕ್ಕೂ ಶುಭವಾಗಲೆಂದು ಹಾರೈಸುತ್ತೇನೆ.

ನಮ್ಮ 'ಬೃಹಚ್ಚರಣ' ಪತ್ರಿಕೆಯು 5 ವರ್ಷಗಳನ್ನು ಪೂರ್ಣಗೊಳಿಸಿದೆ ಎಂದು ತಿಳಿಸಲು ಸಂತಸ. ಇದಕ್ಕೆ ಕಾರ್ಯಕಾರಿ ಸಮಿತಿ ಹಾಗೂ ಸಂಪಾದಕ ಮಂಡಳಿಯ ಸಹಕಾರಕ್ಕೆ ಅಭಿನಂದನೆಗಳು. ಲೇಖಕರು ಮತ್ತು ಪ್ರಾಯೋಜಕರಿಗೆ, ವಿದ್ಯಾನಿಧಿಗೆ ಉದಾರವಾಗಿ ದೇಣಿಗೆ ನೀಡುತ್ತಿರುವವರಿಗೂ ಕೃತಜ್ಞತೆಗಳು. ಸದಸ್ಯರು ವಾರ್ಷಿಕ ನಿರ್ವಹಣಾ ವೆಚ್ಚವನ್ನು ಸಕಾಲದಲ್ಲಿ ಪಾವತಿಸುತ್ತಿರುವುದು ಸಂತಸದ ವಿಷಯ. ನೀಡಬೇಕಿರುವವರೂ ಕೂಡಲೆ ಪಾವತಿಸಲು ಬಿನ್ನಹ.

ಸಮುದಾಯದ ಹಿರಿಯ ಶಿಕ್ಷಕರನ್ನು ಗೌರವಿಸುವ 'ಗುರುವಂದನೆ' ಕಾರ್ಯಕ್ರಮವು ದಿ. 11–9–2016ರಂದು ವಿಜೃಂಭಣೆಯಿಂದ ನಡೆದಿರುವುದಕ್ಕೆ ತಮ್ಮೆಲ್ಲರ ಸಹಕಾರವೇ ಕಾರಣ. ಇದೇ ಸಂದರ್ಭದಲ್ಲಿ ನಮ್ಮನ್ನಗಲಿರುವ ನಮ್ಮ ಸಮುದಾಯದ ಎಲ್ಲಾ ಶಿಕ್ಷಕರನ್ನು ಗೌರವದಿಂದ ಸ್ಮರಿಸುವುದು ನಮ್ಮ ಕರ್ತವ್ಯ. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭೆಯ ಅಧ್ಯಕ್ಷರಾದ ಶ್ರೀ ಕೆ.ಎನ್. ವೆಂಕಟನಾರಾಯಣ ಹಾಗೂ ಮಾಜಿ ಮಹಾಪೌರರು ಹಾಗೂ ನಗರಸಭಾ ಸದಸ್ಯರು ಆಗಿರುವ ಶ್ರೀ ಬಿ.ಎಸ್. ಸತ್ಯನಾರಾಯಣರವರು ನಮ್ಮ ಸಂಘದ ಬಗ್ಗೆ ಮೆಚ್ಚುಗೆ ಸೂಚಿಸಿದ್ದು ಸಂತೋಷದ ವಿಷಯ. ಅಂದು 41 ಶಿಕ್ಷಕರನ್ನು ಗೌರವಿಸುವ ಭಾಗ್ಯ ನಮ್ಮದಾಗಿತ್ತು. ಕಾರ್ಯಕ್ರಮ ಸುಗಮವಾಗಿ ನಡೆಯಲು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಕಾರ್ಯಕಾರಿ ಸಮಿತಿಯು ಆಭಾರಿ, ಮಲ್ಲಿಕಾರ್ಜುನ ದೇವಸ್ಥಾನದ ಆಡಳಿತ ಮಂಡಳಿಯ ಶ್ರೀ ನಾರಾಯಣ್, ಶ್ರೀ ರಾಜಣ್ಣ ಹಾಗೂ ಪ್ರಾಯೋಜಕರಿಗೆ ವಂದನೆಗಳು.

ಐದು ವರ್ಷಗಳಿಂದ ಸತತವಾಗಿ ಛಾಯಚಿತ್ರಗಳನ್ನು ತೆಗೆದು ಸಂಸ್ಕರಿಸಿ ಒದಗಿಸುತ್ತಿರುವ ಸಂಘದ ಸದಸ್ಯ ಶ್ರೀ ಎನ್. ಶಿವಕುಮಾರ್ ರವರಿಗೆ ಧನ್ಯವಾದಗಳು.





ತಮ್ಮವ,

■ ಎಸ್. ಸೋಮಸುಂದರ

## 'ಗುರುವಂದನೆ' ವಿಶೇಷಾಂಕ



'ಗುರುವಂದನೆ' ಸಮಾರಂಭದ ಮುಖ್ಯ ಅತಿಥಿಯಾಗಿದ್ದ ಶ್ರೀ ವೆಂಕಟನಾರಾಯಣ ಹಾಗೂ ಶ್ರೀ ಕಟ್ಟೆ ಸತ್ಯನಾರಾಯಣ ಅವರನ್ನು ಸಂಘ ಗೌರವಿಸಿದ ಸಂದರ್ಭ

**ಬೃಹಚ್ಚರಣ ಬಂಧುಗಳಿಗೆ....**

### ಪ್ರವಾಸ

ಪ್ರತಿವರ್ಷದಂತೆ ಈ ವರ್ಷ ತಾ.27.11.2016 ನೇ ಭಾನುವಾರದಂದು ಮೇಲುಕೋಟೆ ಹಾಗೂ ಕೆರೆತೊಂಡೂರಿಗೆ ಬೃಹಚ್ಚರಣ ಸಂಘವು ಪ್ರವಾಸ ಏರ್ಪಡಿಸಿದೆ. ಆಸಕ್ತಿಯುಳ್ಳವರು ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಸಂಪರ್ಕಿಸಲು ವಿನಂತಿ. ದಿನಾಂಕ 12.11.2016ರಂದು ಆಸನಗಳನ್ನು ಕಾದಿರಿಸಿಕೊಳ್ಳಲು ಕೊನೆಯ ದಿನ.

ದಿ. 27.11.2016 ಬೆಳಗ್ಗೆ 6.30ಕ್ಕೆ ಬಸವನಗುಡಿಯ ದ್ವಾರಕಾನಾಥ ಭವನದ ಎದುರುಗಡೆಯಿಂದ (ಕೃಷ್ಣರಾವ್ ಪಾರ್ಕ್) ಹೊರಡುವುದು. ರಾತ್ರಿ 8.30ಕ್ಕೆ ಬೆಂಗಳೂರಿಗೆ ವಾಪಸ್. ಪ್ರತಿ ಪ್ರಯಾಣಿಕರಿಗೆ ಅಂದಾಜು ವೆಚ್ಚ, (ಉಪಹಾರ, ಊಟ, ರಾತ್ರಿಯ ಫಲಹಾರ, ಪ್ರಯಾಣದ ದರ ಸೇರಿ) ರೂ.1000/–.

### WHATSAPP GROUP

ಸಂಘದ ಚಟುವಟಿಕೆಗಳನ್ನು ಆಗಿಂದಾಗ್ಗೆ ಸದಸ್ಯರಿಗೆ ತಿಳಿಸಲು Official Bruhacharana ಎಂಬ whatsapp Group ಈಗಾಗಲೇ ಚಾಲ್ತಿಯಲ್ಲಿದೆ. ಆಸಕ್ತಿಯುಳ್ಳ ಸಂಘದ ಸದಸ್ಯರು ಈ ಗುಂಪಿನಲ್ಲಿ ನೋಂದಾಯಿಸಿ ಕೊಳ್ಳಲು ತಮ್ಮ ಮೊಬೈಲ್ ಸಂಖ್ಯೆಯನ್ನು ಗ್ರೂಪ್ ಅಡ್ಮಿನ್‌ರವರಿಗೆ ನೀಡಲು ವಿನಂತಿ.

**GROUP ADMINS**

Somasundara - 9900113298
Arun. V. - 9880166001
Manjunarayan - 9886114279
H.K.Shashidhar - 9845173766
V.S.Mani - 9845055582

ವಿ.ಎಸ್. ಮಣಿ, ಕಾರ್ಯದರ್ಶಿ
ಎಂ.ಎಂ.ಡಿ.ಬಿ.ಎಸ್.

# ಮೈ.ಮಂ.ದ್ರಾ.ಬೃ. ಸಂಘದ ಕಾರ್ಯಕಾರಿ ಸಮಿತಿ

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಂಗ ಸಂಸ್ಥೆ**

**ಕಾರ್ಯಕಾರಿ ಸಮಿತಿ : 2015–2018**

| | | |
|---|---|---|
| ಅಧ್ಯಕ್ಷರು | : | **ಎಸ್. ಸೋಮಸುಂದರ, 99001 13298** |
| ಉಪಾಧ್ಯಕ್ಷರು | : | **ಎಚ್.ಕೆ. ಶಶಿಧರ್, 98451 73766** |
| ಕಾರ್ಯದರ್ಶಿ | : | **ವಿ.ಎಸ್. ಮಣಿ, 98450 55582** |
| ಸಹಕಾರ್ಯದರ್ಶಿ | : | **ಅರುಣ್ ವಿ., 98801 66001** |
| ಖಜಾಂಚಿ | : | **ಎಸ್. ಸತ್ಯನಾರಾಯಣ, 99809 45699** |
| ಲೆಕ್ಕಪರಿಶೋಧಕರು | : | **ಎಸ್.ಸಿ. ಶ್ರೀನಿವಾಸ, 98453 76949** |
| ಗೌರವ ಸದಸ್ಯರು | : | **ಮಂಜುನಾರಾಯಣ್ ಕೆ. 98861 14279** |
| | | **ಟಿ.ಎಸ್. ಮಣಿ, 98451 76335** |
| | | **ಟಿ.ಎಸ್. ರಮೇಶನ್, 96638 74531** |
| | | **ಟಿ.ಪಿ. ಸೂರ್ಯ ನಾರಾಯಣ, 99454 84268** |
| | | **ಸರಸ್ವತಿ ನಟರಾಜನ್, 94806 19730** |
| | | **ಕೆ. ಜಿ. ವೆಂಕಟೇಶ್, 99640 12687** |
| | | **ಆರ್. ಗಣೇಶ್ ಶ್ರೀಧರ್, 9880187686** |
| | | **ಟಿ. ನಾಗೇಶ್, 99806 62118** |
| | | **ಬಿ.ಎನ್.ಜಿ. ಪ್ರಸಾದ್, 9845128229** |
| | | **ಸುಬ್ರಹ್ಮಣ್ಯಂ ಬೆಂಗಳೂರು, 94498 69667** |
| | | **ಕೆ.ಬಿ.ಎಸ್. ಶರ್ಮ, 94820 87344** |
| | | **ಅನಂತ ಕೆ.ಎಸ್. 97404 44222** |
| | | **ಶಂಕರ ಪ್ರಸಾದ್ ಬಿ.ಆರ್. 98456 63833** |

## ನಿಮ್ಮೊಡನೆ....

ಪ್ರತಿಭೆಯು ಯಾರ ಸೊತ್ತೂ ಅಲ್ಲ. ಯಾವ ಪ್ರಾಕಾರದಲ್ಲಾದರೂ ಇರಬಹುದು. ತಾಯಿ, ತಂದೆ, ಗುರು, ಹಿತೈಷಿಗಳ ಮಾರ್ಗದರ್ಶನ ದೊಂದಿಗೆ ವ್ಯಕ್ತಿಯಲ್ಲಿ ಸಾಧನೆ, ಛಲ, ತ್ಯಾಗವಿದ್ದರೆ ಗುರಿ ಮುಟ್ಟಲು ಸಾಧ್ಯ. ಇಂತಹ ಪ್ರತಿಭಾ ವ್ಯಕ್ತಿಗಳನ್ನು ಗೌರವಿಸಿ, ಬೆಳಕಿಗೆ ತೆರುವುದು ಸಂಘ ಸಂಸ್ಥೆಗಳಿಗೆ ಮಾತ್ರ ಸಾಧ್ಯ.

'ಬೃಹಚ್ಚರಣ' ಸಂಘವು ನಮ್ಮ ಪ್ರತಿಭಾನ್ವಿತ ವಿದ್ಯಾರ್ಥಿಗಳು ಯುವಕರು, ವೃತ್ತಿಪರರು ಯಾರಿಗೂ ಕಮ್ಮಿ ಇಲ್ಲವೆಂದೂ, ಅಂತಹ ವ್ಯಕ್ತಿಗಳು ಪ್ರವರ್ಧಮಾನಕ್ಕೆ ಬರಬೇಕೆಂಬ ಸದುದ್ದೇಶದಿಂದಲೂ 'ಬೃಹಚ್ಚರಣ'ದಲ್ಲಿ ಅಂತಹವರ ವಿವರಗಳನ್ನು ಪ್ರಕಟಿಸುವ ಕಾರ್ಯಹಮ್ಮಿ ಕೊಂಡಿದ್ದು, ವಿವರಗಳನ್ನು ಕಳುಹಿಸಿದಲ್ಲಿ ಪ್ರಕಟಿಸಲಾಗುವುದು.

**ಸಂ.**




ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರು ಬೃಹಚ್ಚರಣ ಸಂಚಿಕೆಯೊಂದಿಗೆ

## ಮನದ ಮಾತು...

'ಬೃಹಚ್ಚರಣ ತ್ರೈಮಾಸಿಕ ಪತ್ರಿಕೆಗೆ ಐದು ವರ್ಷ ತುಂಬಿರುವುದು ನಮ್ಮೆಲ್ಲರಿಗೂ ಸಂತಸದ ವಿಷಯ. ಈ ಪತ್ರಿಕೆಯು ಸಮುದಾಯದ ಸದಸ್ಯರೆಲ್ಲರ ಆಶಯದ ಕೈಪಿಡಿಯಾಗಿ ಸಂಘ–ಸದಸ್ಯರ ಸಂಪರ್ಕ ಸೇತುವೆಯಂತಿರಬೇಕೆಂಬುದೇ ಕಾರ್ಯಕಾರಿ ಸಮಿತಿಯ ಹೆಬ್ಬಯಕೆ. ಉತ್ತಮ ಸಲಹೆಗಳು, ಲೇಖನಗಳು ಅಳವಡಿಕೆಯೊಂದಿಗೆ ಮುಂದಿನ ದಿನಗಳಲ್ಲಿ ಕೆಲವು ಮಾರ್ಪಾಡುಗಳು ಆಗಲಿವೆ.

ದಿನಾಂಕ 3–10–2010ರಂದು ಕಿತ್ತಗಾನಹಳ್ಳಿಯಲ್ಲಿ ನಡೆದ ಸರ್ವ ಸದಸ್ಯರ ಸಭೆಯ ತೀರ್ಮಾನದಂತೆ ಈ ಪತ್ರಿಕೆಯ ಮೊದಲ ಸಂಚಿಕೆಯು ಜುಲೈ–ಸೆಪ್ಟೆಂಬರ್ 2011ರಲ್ಲಿ ಹಿರಿಯ ಪ್ರಜ್ಞಾವಂತ ಶ್ರೀ ಡಿ.ವಿ.ಜಿ. ಯವರಿಗೆ ಅರ್ಪಿಸುವ ಮೂಲಕ ಪ್ರಾರಂಭವಾದ ವಿಷಯ ತಮಗೆ ತಿಳಿದಿದೆ. ಈ ಸಂದರ್ಭದಲ್ಲಿ ನನಗೆ ಸಂಪಾದಕನಾಗುವ ಅವಕಾಶವನ್ನು ಕಲ್ಪಿಸಿದ ಸಂಘದ ಅಧ್ಯಕ್ಷ ಶ್ರೀ ಸೋಮಸುಂದರ, ಕಾರ್ಯದರ್ಶಿ ಶ್ರೀ ವಿ.ಎಸ್. ಮಣಿ ಹಾಗೂ ಸಮುದಾಯದ ಹಿತೈಷಿಗಳಿಗೆ ಧನ್ಯವಾದಗಳು. ಸಂಘದ ಆಗು–ಹೋಗುಗಳು ಹಾಗೂ ಲಲಿತ ಕಲೆಗಳ ಎಲ್ಲಾ ಪ್ರಾಕಾರಗಳನ್ನೊಳಗೊಂಡ ಸುಸಂಸ್ಕೃತ, ಸುಂದರ ಪತ್ರಿಕೆಯು ಇದಾಗಬೇಕೆಂದು ಸಂಪಾದಕ ಮಂಡಲಿ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರ ಆಶಯ. ಈ ನಿಟ್ಟಿನಲ್ಲಿ ನನ್ನ 45 ವರ್ಷಗಳ ಪತ್ರಿಕಾ ಮಾಧ್ಯಮ ಸಂಪರ್ಕ ಇಲಾಖೆಯಲ್ಲಿನ ಸೇವೆಯ ಅನುಭವವು ನನ್ನದೆ ಆದ ಚೌಕಟ್ಟಿನೊಳಗೆ ಕೆಲಸ ನಿರ್ವಹಿಸಲು ಅನುವು ಮಾಡಿಕೊಟ್ಟಿದೆ. ಸಂಘದ ಕಾರ್ಯ ನಿರ್ವಾಹಕ ಮಂಡಳಿಯು ನನಗೆ ಪೂರ್ಣ ಸ್ವಾತಂತ್ರ್ಯ ನೀಡಿರುವುದಕ್ಕೆ ನಾನು ಆಭಾರಿಯಾಗಿದ್ದೇನೆ. ನಿಮ್ಮವ,



■ **ಕೆ.ಸಿ.ನಟರಾಜನ್**
ಸಂಪಾದಕ, 9845113475

## ಸಂಘಕ್ಕೆ ಹೊಸ ಸದಸ್ಯರು

1. ವಿಶ್ವನಾಥ್ ನಟರಾಜನ್ — **ರೂ. 1000/–**

**ಸುದ್ದಿಮನೆ**

## ರಾಜ್ಯಮಟ್ಟದ ಬ್ರಾಹ್ಮಣ ಮಹಾಸಮ್ಮೇಳನ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯು ಬೆಳಗಾವಿಯಲ್ಲಿ ಈ ವರ್ಷದ ಡಿಸೆಂಬರ್ 11 ಮತ್ತು 12ರಂದು 'ರಾಜ್ಯಮಟ್ಟದ 9ನೇ ಬ್ರಾಹ್ಮಣ ಮಹಾಸಮ್ಮೇಳನ 2016' ನಡೆಸಲು ತೀರ್ಮಾನಿಸಿದೆ. ಬ್ರಾಹ್ಮಣ ಜಾಗೃತಿ, ಐಕ್ಯತೆ, ಸಂಘಟನೆ, ಎದುರಿಸಬೇಕಾಗಿರುವ ಸವಾಲುಗಳು ಮತ್ತಿತರ ಪ್ರಸ್ತುತ ವಿಷಯಗಳ ಬಗ್ಗೆ ಹಾಗೂ ಸ್ವಾವಲಂಬನೆ, ಮಹಿಳೆಯರಿಗೆ ಶಿಕ್ಷಣ, ಉದ್ಯೋಗ, ಅಲ್ಲದೇ, ವೈದಿಕ ಸಂಪ್ರದಾಯ, ಸಂಸ್ಕಾರ, ಸಂಸ್ಕೃತಿ ಇವುಗಳ ಬಗ್ಗೆ ವಿಚಾರ ಗೋಷ್ಠಿಗಳು ನಡೆಯಲಿವೆ. ಬ್ರಾಹ್ಮಣ ಸಮುದಾಯದ ಉಳಿವಿಗೇ ಸಂಚಕಾರ ಬರುತ್ತಿರುವ ಈ ಸಂಧರ್ಭದಲ್ಲಿ ಈ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಈ ಸಮಾವೇಶದಲಿ ಭಾಗವಹಿಸಬೇಕು, ತನ್ಮೂಲಕ ನಮ್ಮ ಸಮುದಾಯದ ಸಾಮರ್ಥ್ಯವು ಬೆಳಕಿಗೆ ಬರುವಂತಾಗಬೇಕು. ಈ ಬಗ್ಗೆ ಬೃಹಚ್ಚರಣ ಸಂಘದ ಮೂಲಕ ಬ್ರಾಹ್ಮಣ ಮಹಾಸಭೆಯ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಸಂಪರ್ಕಿಸಬಹುದು ಎಂದು ಮಹಾಸಭೆಯ ಅಧ್ಯಕ್ಷ ಶ್ರೀ ವೆಂಕಟನಾರಾಯಣ ಅವರು ತಿಳಿಸಿರುತ್ತಾರೆ.

# ‘ಗುರುವಂದನೆ’ ಕಾರ್ಯಕ್ರಮದ ಛಾಯಾಚಿತ್ರಗಳು

ಚಿತ್ರಗಳ ಕೃಪೆ : ಶಿವಕುಮಾರ್ ಎನ್.



ದೀಪ ಬೆಳಗುತ್ತಿರುವ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರು



ವೇದಘೋಷ ಶ್ರೀಯುತ ರಮೇಶ್ ಹಾಗೂ ಶಶಿಧರ್ ಅವರಿಂದ




ಸಂಘದ ಅಧ್ಯಕ್ಷರಿಂದ ಮುಖ್ಯ ಅತಿಥಿಗಳ ಪರಿಚಯ



ಕಾರ್ಯದರ್ಶಿಯವರಿಂದ ಸಂಘದ ಚಟುವಟಿಕೆಗಳ ವಿವರಣೆ



ಮುಖ್ಯ ಅತಿಥಿ ಶ್ರೀ ವೆಂಕಟನಾರಾಯಣ ಅವರಿಂದ ಹಿತವಚನ



ಶ್ರೀಯುತ ಕಟ್ಟೆ ಸತ್ಯನಾರಾಯಣರವರಿಂದ ಹಿತನುಡಿ



ಸಭೆಯಲ್ಲಿ ಗೌರವಾನ್ವಿತ ಶಿಕ್ಷಕರು



ಸಹಭೋಜನ

# ‘ಗುರುವಂದನೆ’ ಕಾರ್ಯಕ್ರಮ- ಒಂದು ಪಕ್ಷಿನೋಟ

ದಿನಾಂಕ 11–9–2016 ಭಾನುವಾರದಂದು ಸಂಜೆ ಗುರು ವಂದನೆ ಕಾರ್ಯಕ್ರಮವನ್ನು ಬಸವನಗುಡಿಯ ಶ್ರೀ ಮಲ್ಲಿಕಾರ್ಜುನ ದೇವಾಲಯದ ಆವರಣದ ಭ್ರಮರಾಂಬಿಕ ಮಂಗಳಸದನದಲ್ಲಿ ಆಯೋಜಿಸ ಲಾಗಿತ್ತು. ಕಾರ್ಯಕ್ರಮದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾದ ಶ್ರೀ ಕೆ.ಎನ್. ವೆಂಕಟನಾರಾಯಣ ಮತ್ತು ಬೆಂಗಳೂರಿನ ಮಾಜಿ ಮಹಾ ಪೌರರು ಹಾಗೂ ನಗರ ಸಭಾ ಸದಸ್ಯರಾದ ಶ್ರೀ ಬಿ.ಎಸ್. ಸತ್ಯನಾರಾಯಣರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಕಾರ್ಯಕ್ರಮದ ಮೊದಲು ಅತಿಥಿಗಳನ್ನು ವೇದಿಕೆಗೆ ಅಧ್ಯಕ್ಷ ಸೋಮ ಸುಂದರ್ ಮತ್ತು ಕಾರ್ಯದರ್ಶಿಗಳು ಬರಮಾಡಿಕೊಂಡರು. ಕಾರ್ಯಕ್ರಮವು ಸಂಘದ ಕಾರ್ಯಕಾರಿ ಸಮಿತಿಯ ಉಪಾಧ್ಯಕ್ಷರಾದ ಶ್ರೀ ಎಚ್.ಕೆ. ಶಶಿಧರ್ ಮತ್ತು ಸಂಘದ ಪೋಷಕರಾದ ಶ್ರೀ ಆರ್. ರಮೇಶ್ ರವರ ವೇದಘೋಷದ ನಂತರ ಅತಿಥಿಗಳಿಂದ ಜ್ಞಾನ ಜ್ಯೋತಿ ಬೆಳಗುವ ಮೂಲಕ ಪ್ರಾರಂಭ ವಾಯಿತು. ರಾಷ್ಟ್ರಪ್ರಶಸ್ತಿ ವಿಜೇತ ಶಿಕ್ಷಕಿ ಶ್ರೀಮತಿ ಶ್ರೀದೇವಿ ಬಾಲಸುಬ್ರಹ್ಮಣ್ಯಂರವರು ಪ್ರಾರ್ಥನೆ ಸಲ್ಲಿಸಿದರು.



ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯ ಶ್ರೀ ಬಿ.ಎನ್.ಜಿ. ಪ್ರಸಾದ್‌ರವರು ಅತಿಥಿಗಳನ್ನು ಮತ್ತು ನೆರೆದ ಸಭಿಕರನ್ನು ಸ್ವಾಗತಿಸಿದರು. ಸಂಘದ ಅಧ್ಯಕ್ಷರಾದ ಶ್ರೀ ಸೋಮಸುಂದರರವರು ಅತಿಥಿಗಳನ್ನು ಸಭೆಗೆ ಪರಿಚಯಿಸಿದರು. ಸಂಘದ ಕಾರ್ಯದರ್ಶಿಗಳಾದ ಶ್ರೀ ವಿ.ಎಸ್. ಮಣಿಯವರು ಸಂಘದ ಕಾರ್ಯ ಚಟುವಟಿಕೆಗಳ ಬಗ್ಗೆ ಸವಿವರವಾಗಿ ತಿಳಿಸಿದರು. ಸಮುದಾಯದ 41 ಹಿರಿಯ ಶಿಕ್ಷಕರನ್ನು ನೆನಪಿನ ಕಾಣಿಕೆ ಮತ್ತು ಅಭಿನಂದನಾಪತ್ರದೊಂದಿಗೆ ಗೌರವಿಸಲಾಯಿತು.

ಮುಖ್ಯ ಅತಿಥಿಗಳಾದ ಶ್ರೀ ಕೆ.ಎನ್. ವೆಂಕಟನಾರಾಯಣರವರು ನಮ್ಮ ಸಮುದಾಯದ ಶ್ರೇಷ್ಠ ವ್ಯಕ್ತಿಗಳಾದ ಡಿ.ವಿ.ಜಿ.ಯವರ ‘ಮಂಕುತಿಮ್ಮನ ಕಗ್ಗ’ದೊಂದಿಗೆ ಹಿತನುಡಿ ಪ್ರಾರಂಭಿಸಿ, ಮಾಜಿ ರಾಷ್ಟ್ರಪತಿ ಮತ್ತು ಶಿಕ್ಷಣತಜ್ಞ, ತತ್ತ್ವಜ್ಞಾನಿ ಡಾ॥ ರಾಧಾಕೃಷ್ಣನ್‌ರವರ ಶ್ರೇಷ್ಠತೆಯನ್ನು ವಿವರಿಸಿ ಅವರನ್ನು ದೇಶ ವಿದೇಶಗಳ ನಾಯಕರೂ ಗೌರವಿಸಿದ್ದನ್ನು ಸ್ಮರಿಸಿದರು. ಅಂದಿನ ಗೌರವಾನ್ವಿತರಲ್ಲಿ ತಮ್ಮ ಗುರುಗಳಾದ ಶ್ರೀ ಬಿ.ಎಸ್. ಪದ್ಮನಾಭ್ ಮತ್ತು ಆರ್.ಎಸ್. ರಾಜಗೋಪಾಲ್ ಇರುವುದನ್ನು ಹೆಮ್ಮೆಯಿಂದ ಸ್ಮರಿಸಿದರು.

ಶ್ರೀ ಬಿ.ಎಸ್. ಸತ್ಯನಾರಾಯಣ್‌ರವರು ತಮ್ಮ ನುಡಿಯಲ್ಲಿ ಸಂಘದ ಕಾರ್ಯಗಳನ್ನು ಶ್ಲಾಘಿಸಿ, ಮುಂದಿನ ಪೀಳಿಗೆಯ ಯುವಕರು ಸಂಘದ ಚಟುವಟಿಕೆಗಳಲ್ಲಿ ಸಾಮಾಜಿಕ ಕಳಕಳಿಯಿಂದ ಭಾಗವಹಿಸಬೇಕೆಂದು ಮನವಿ ಮಾಡಿದರು. ಶ್ರೀ ಡಿ.ವಿ. ಗುಂಡಪ್ಪನವರನ್ನು ಕುರಿತು ಒಂದು ದಿನದ ಕಾರ್ಯಗಾರವನ್ನು ನಡೆಸಲು ಸಲಹೆ ನೀಡಿ ಅದರಲ್ಲಿ ನಮ್ಮ ಸಮುದಾಯದವರೆಲ್ಲರನ್ನೂ ಭಾಗವಹಿಸಲು ಸೂಚಿಸಿದರು.

ಸನ್ಮಾನಿತರ ಪರವಾಗಿ ರಾಷ್ಟ್ರ ಪ್ರಶಸ್ತಿ ವಿಜೇತ ಶಿಕ್ಷಕರಾದ ಶ್ರೀ ಆರ್.ಎಸ್. ರಾಜಗೋಪಾಲ್‌ರವರು ಮಾತನಾಡಿ, ತಮ್ಮ ವ್ಯಕ್ತಿ ಜೀವನದ ಆಗುಹೋಗುಗಳನ್ನು ಮೆಲುಕು ಹಾಕಿದರು. ಇದೇ ಸಂದರ್ಭದಲ್ಲಿ ಸಂಘದ ಸದಸ್ಯೆ ಹಾಗೂ ಪ್ರಾಧ್ಯಾಪಕಿ ಶ್ರೀಮತಿ ಮಾನಸ ಅರವಿಂದ್‌ರವರು ಶಿಕ್ಷಕರ ದಿನಾಚರಣೆಯ ಬಗ್ಗೆ ವಿವರಿಸಿದರು. ಗೌರವಾನ್ವಿತ ಶಿಕ್ಷಕರನ್ನು ಸಂಘದ ವತಿಯಿಂದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀಯುತರಾದ ಬಿ. ಸುಬ್ರಹ್ಮಣ್ಯಂ, ಹೆಚ್.ಕೆ. ಶಶಿಧರ್, ಅನಂತ ಕೆ.ಎಸ್. ಶ್ರೀಮತಿಯರಾದ ಸರಸ್ವತಿ ನಟರಾಜನ್, ಲಲಿತಾ ರಮೇಶ್‌ರವರು ಸಭೆಗೆ ಪರಿಚಯಿಸಿದರು. ಹಾಗೂ ಎಸ್.ಸಿ. ಶ್ರೀನಿವಾಸ್, ಎಸ್. ಸತ್ಯನಾರಾಯಾಣ, ಬಿ.ಆರ್. ಶಂಕರ ಪ್ರಸಾದ್, ಟಿ.ಎಸ್. ನಾಗೇಶ್, ಎಸ್.ವಿ. ಅರುಣ್, ಆರ್. ಗಣೇಶ್ ಶ್ರೀಧರ್, ಕೆ.ಬಿ.ಎಸ್. ಶರ್ಮರವರು ಸಹಕಾರ ನೀಡಿದರು. ಕಾರ್ಯಕ್ರಮ ನಿರೂಪಿಸಿದ ಶಿಕ್ಷಕಿ ಹಾಗೂ ಸಂಘದ ಸದಸ್ಯೆ ಶ್ರೀಮತಿ ಶುಭಾ ಗೋವಿಂದರಾವ್‌ರವರು ಸಮಾರಂಭದ ಮುಖ್ಯ ಅತಿಥಿಗಳಿಂದ ನೆನಪಿನ ಕಾಣಿಕೆ ಸ್ವೀಕರಿಸಿದರು. ಪ್ರಸಾದ ಭೋಜನದೊಂದಿಗೆ ಕಾರ್ಯಕ್ರಮವು ಸವಿ ನೆನಪಿನೊಂದಿಗೆ ಕೊನೆಗೊಂಡಿತು.



–ವೀಕ್ಷಕ



ಶ್ರೀಮತಿ ಶ್ರೀದೇವಿ ಬಾಲಸುಬ್ರಹ್ಮಣ್ಯಂರಿಂದ ಪ್ರಾರ್ಥನೆ



ಕಾರ್ಯಕ್ರಮ ನಿರೂಪಿಸಿದ ಶಿಕ್ಷಕಿ ಶ್ರೀಮತಿ ಶುಭಾ ಜಿ. ರಾವ್...



ಶಿಕ್ಷಕರ ದಿನಾಚರಣೆ ಬಗ್ಗೆ ವಿವರ ನೀಡಿದ ಪ್ರಾಧ್ಯಾಪಕಿ ಶ್ರೀಮತಿ ಮಾನಸ ಅರವಿಂದ್

‘ಬೃಹಚ್ಚರಣ’ ದೊಂದಿಗೆ 87 ವರ್ಷದ ಶ್ರೀಮತಿ ಲಕ್ಷ್ಮೀದೇವಮ್ಮ



# ಸೆಪ್ಟೆಂಬರ್ 11 2016ರಂದು ಜರುಗಿದ 'ಗುರುವಂದನ' ಸಮಾರಂಭ

## ಬೃಹಚ್ಚರಣ ಸಮುದಾಯದಲ್ಲಿನ ನಿವೃತ್ತ ಶಿಕ್ಷಕರ ಪರಿಚಯ

ಬೃಹಚ್ಚರಣ ಸಮುದಾಯದಲ್ಲಿ ಹುಟ್ಟಿ, ಬೆಳೆದು ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿ ಅನೇಕಾನೇಕ ಪ್ರತಿಭಾವಂತ ಯುವಕ ಯುವತಿಯರು ಮೂಡಿಬರಲು ಕಾರಣಕರ್ತರಾದ ಕೆಲವು ಮಹನೀಯ ಮಹಿಳೆಯರಿಗೆ ಈಚೆಗೆ ಸಂಘದ ವತಿಯಿಂದ ಗೌರವ ಸಲ್ಲಿಸಲಾಯಿತು. ಇವರೆಲ್ಲರನ್ನು ಈ ಸಂಚಿಕೆಯಲ್ಲಿ ಪರಿಚಯಿಸಲು ಸಂಘಕ್ಕೆ ಹರ್ಷವಾಗುತ್ತದೆ.



**ಶ್ರೀ ಬಿ.ಎಸ್. ಪದ್ಮನಾಭ್:** ಶ್ರೀ ಬಿ.ಎಸ್. ಪದ್ಮನಾಭ್ ಅವರು ಬಿನ್ನಮಂಗಲ ಗ್ರಾಮದ ಶ್ರೀ ಸೇತೂರಾಮಯ್ಯ ಮತ್ತು ಶ್ರೀಮತಿ ಸುಬ್ಬಮ್ಮನವರ ಪುತ್ರರು. ಆಲಿಘರ್ ವಿಶ್ವವಿದ್ಯಾಲದಿಂದ ಎಂ.ಕಾಂ ಪದವಿ ಗಳಿಸಿದ ಶ್ರೀಯುತರು ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿದ್ದಾರೆ. ಬೆಂಗಳೂರು ಪ್ರೌಢಶಾಲೆಯಲ್ಲಿ 14 ವರ್ಷಗಳ ಕಾಲ ಸೇವೆ ಸಲ್ಲಿಸಿ, ನಂತರ ಆಚಾರ್ಯ ಪಾಠಶಾಲಾ ವಾಣಿಜ್ಯ ಕಾಲೇಜಿನಲ್ಲಿ ಉಪನ್ಯಾಸಕರಾಗಿ, ನಂತರ 10 ವರ್ಷಗಳ ಕಾಲ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ನಿವೃತ್ತರಾದರು. ನಿವೃತ್ತಿಯ ನಂತರ 1982ರಲ್ಲಿ ವಾಸವಿ ವಿದ್ಯಾನಿಕೇತನದ ಪ್ರಾಂಶುಪಾಲರಾಗಿ, ಆಡಳಿತ ನಿರ್ದೇಶಕರಾಗಿ ಆ ಸಂಸ್ಥೆಯ ಬೆಳವಣಿಗೆಗೆ ಕೊಡುಗೆ ನೀಡಿದ್ದಾರೆ.

ಇದಲ್ಲದೇ, ಸಮಾಜಸೇವಾಸಂಸ್ಥೆಗಳಾದ ಉದಯಭಾನು ಕಲಾಸಂಘ, ಯುವಕಸಂಘ ಮತ್ತಿತರ ಸಂಸ್ಥೆಗಳೊಡನೆ ಕೈಗೂಡಿಸಿ ಶೈಕ್ಷಣಿಕ ಕಾರ್ಯ ಯೋಜನೆಗಳ ಯಶಸ್ಸಿಗೆ ತಮ್ಮ ಅಪಾರ ಅನುಭವವನ್ನು ಧಾರೆಯೆರೆದಿದ್ದಾರೆ.

**ಬಿ.ಎಸ್. ಸೂರ್ಯನಾರಾಯಣ:** ಶ್ರೀ ಬಿ.ಎಸ್. ಸೂರ್ಯನಾರಾಯಣ ಅವರದು ಶ್ಯಾನುಭೋಗರ ಕುಟುಂಬ. ಶ್ರೀ ಸುಬ್ಬರಾಯಪ್ಪ ಮತ್ತು ಶ್ರೀಮತಿ ಸುಬ್ಬಮ್ಮನವರ ಪುತ್ರರಾದ ಸೂರ್ಯನಾರಾಯಣ ಅವರು ಮೈಸೂರು ವಿಶ್ವವಿದ್ಯಾಲಯದಿಂದ ಸಮಾಜಶಾಸ್ತ್ರದಲ್ಲಿ ಎಂ.ಎ. ಪದವಿ ಅಲ್ಲದೆ ಬೆಂಗಳೂರು ವಿಶ್ವವಿದ್ಯಾಲಯದಿಂದ ಎಂ.ಫಿಲ್ ಪದವಿಯನ್ನು ಗಳಿಸಿದ್ದಾರೆ. ಉಪನ್ಯಾಸಕರಾಗಿ ವೃತ್ತಿಜೀವನವನ್ನು ಪ್ರಾರಂಭಿಸಿದ ಶ್ರೀಯುತರು ಎ.ಪಿ.ಎಸ್. ಕಾಲೇಜು, ವಿ.ವಿ.ಎನ್. ಪದವಿ ಕಾಲೇಜು ಮತ್ತು ಪಿ.ಇ.ಎಸ್. ಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ, ಶೈಕ್ಷಣಿಕ ನಿರ್ದೇಶಕರಾಗಿ ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸಿದ್ದಾರೆ.

ಶಿಕ್ಷಣೇತರ ಚಟುವಟಿಕೆಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದ ಶ್ರೀಯುತರು ನ್ಯಾಷನಲ್ ಕೆಡೆಟ್ ಕೋರ್‌ನಲ್ಲಿ 21 ವರ್ಷಗಳ ಕಾಲ ಕ್ರಿಯಾಶೀಲರಾಗಿದ್ದು ಮೇಜರ್ ಪದವಿಗೇರಿದವರು. ಶ್ರೀಯುತರು ಬೆಂಗಳೂರಿನ ರೋಟರಿ ಕ್ಲಬ್‌ನಿಂದ ಉತ್ತಮ ಶಿಕ್ಷಕ ಪ್ರಶಸ್ತಿಗಳಿಸಿದ್ದಾರೆ. ಶ್ರೀ ಬಿ.ಎಸ್. ಸೂರ್ಯನಾರಾಯಣ ಅವರಿಗೆ ಒಬ್ಬ ಪುತ್ರ ಹಾಗೂ ಒಬ್ಬ ಪುತ್ರಿ ಇದ್ದಾರೆ.

**ಕೆ. ಸತ್ಯನಾರಾಯಣ:** ಶ್ರೀ ಕೆ. ಸತ್ಯನಾರಾಯಣ ಅವರು ಸರ್ಜಾಪುರದ ಶ್ರೀಐ.ಎಸ್. ಕೃಷ್ಣಮೂರ್ತಿ ಮತ್ತು ಶ್ರೀಮತಿ ಪರಿಮಳ ಅವರ ಪುತ್ರರು. ಇತಿಹಾಸ ಮತ್ತು ರಾಜ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಶ್ರೀಯುತರು 1978 ರಿಂದ ಸುಮಾರು 35 ವರ್ಷಗಳ ಕಲಾ ಶಿಕ್ಷಕರಾಗಿ ಫಲಪ್ರದ ಸೇವೆ ಸಲ್ಲಿಸಿದ್ದಾರೆ.

ಪಠ್ಯಪುಸ್ತಕ ರಚನೆ, ಬೋಧನೆಯ ಕ್ರಮ ಹಾಗೂ ಮೌಲ್ಯಮಾಪನದಲ್ಲಿ ವಿಶೇಷ ತರಬೇತಿ ಹೊಂದಿರುವ ಶ್ರೀಯುತರು ಈ ವಿಷಯಗಳಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಅಪಾರ ಸೇವೆ ಸಲ್ಲಿಸಿದ್ದಾರೆ.

ಬೋಧನೆಯನ್ನು ಕೇವಲ ವೃತ್ತಿಯನ್ನಾಗಿಸಿಕೊಳ್ಳದೇ, ಅದರಲ್ಲಿ ತಮಗಿರುವ ಅನುಭವವನ್ನು ಹಿಂದುಳಿದ ಮತ್ತು ಇತರ ಅರ್ಹ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುವ ಮೂಲಕ ಸಾರ್ಥಕಪಡಿಸಿಕೊಂಡಿದ್ದಾರೆ. ಶ್ರೀಯುತರು ಶಿಕ್ಷಕರಿಗೆ ಇಂಗ್ಲೀಷ್ ಭಾಷೆ ಮತ್ತು ಬೋಧನೆಯ ಕ್ರಮದ ಬಗೆಗೆ ಮಾರ್ಗದರ್ಶನ ನೀಡಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ತಮ್ಮ ಅಮೂಲ್ಯ ಸೇವೆಗಾಗಿ ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ "ಅತುತ್ತಮ ಶಿಕ್ಷಕ" ಎಂದು ಪುರಸ್ಕರಿಸಲ್ಪಟ್ಟಿದ್ದಾರೆ.

❖❖❖



**ಆರ್.ಎಸ್. ರಾಜಗೋಪಾಲ್:** ಕಲೆ, ವಿಜ್ಞಾನ ಮತು ಶಿಕ್ಷಣದಲ್ಲಿ ವ್ಯಾಸಂಗ ಮಾಡಿ ಪದವಿ ಗಳಿಸಿರುವ ಶ್ರೀ ಆರ್.ಎಸ್. ರಾಜಗೋಪಾಲ್ ಅವರು ರಾಮಾಯಣಂ ಶ್ರೀನಿವಾಸಮೂರ್ತಿ ಎಂದೇ ಗುರುತಿಸಲ್ಪಡುತ್ತಿದ್ದ ಶ್ರೀ ಶ್ರೀನಿವಾಸಮೂರ್ತಿ ಮತ್ತು ಶ್ರೀಮತಿ ಸರೋಜಮ್ಮ ಅವರ ಪುತ್ರರು. ನಗರದ ಪ್ರತಿಷ್ಠಿತ ಆಚಾರ್ಯ ಪಾಠಶಾಲೆ ವಿದ್ಯಾಸಂಸ್ಥೆಯಲ್ಲಿ 36 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿದ್ದಾರೆ. ಗಣಿತ ಶಾಸ್ತ್ರ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಅಪಾರವಾಗಿ ಕೃಷಿ ಮಾಡಿರುವ ಶ್ರೀಯುತರು ಆ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಅನೇಕ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಅಲ್ಲದೇ ತತ್ವಶಾಸ್ತ್ರದಲ್ಲಿಯೂ ಚಿಂತನೆ ನಡೆಸಿರುವ ಶ್ರೀಯುತರು ವಿದ್ಯಾರ್ಥಿಗಳಿಗಾಗಿ ಅನೇಕ ಪಠ್ಯ ಪುಸ್ತಕಗಳೊಂದಿಗೆ 'ರಾಮತತ್ವದರ್ಶನ' ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ.

ಶಿಕ್ಷಣ ಕ್ಷೇತ್ರದಲ್ಲಿನ ತಮ್ಮ ನಿಸ್ಪೃಹ ಸೇವೆಗಾಗಿ ಶ್ರೀಯುತರು 1996ರಲ್ಲಿ ಭಾರತ ಸರ್ಕಾರದ ರಾಷ್ಟ್ರಪತಿಗಳ ಶಿಕ್ಷಕ ಪ್ರಶಸ್ತಿಯನ್ನುಗಳಿಸಿದ್ದಾರೆ. ಇದಲ್ಲದೇ ಶ್ರೀ ರಾಜಗೋಪಾಲ್ ಅವರು 2016ರಲ್ಲಿ ಮಹಾನಗರ ಪಾಲಿಕೆಯ 'ಕೆಂಪೇಗೌಡ' ಪ್ರಶಸ್ತಿಯನ್ನೂ, 1995ರಲ್ಲಿ ಬೆಂಗಳೂರು ಜಿಲ್ಲೆಯ 'ಅತ್ಯುತ್ತಮ ಶಿಕ್ಷಕ' ಪ್ರಶಸ್ತಿಯನ್ನೂ ಗಳಿಸಿದ್ದಾರೆ.

**ಆರ್.ಎಸ್. ರಾಮಕೃಷ್ಣ:** ಮೂಲತಃ ರಾಜಾಪುರಕ್ಕೆ ಸೇರಿದ ಶ್ರೀ ರಾಮಕೃಷ್ಣ ಅವರು ಶ್ರೀ ಆರ್.ಎಸ್. ರಾಜಗೋಪಾಲ್ ಅವರ ಸಹೋದರರು. ಮುಂದಿನ ವರ್ಷ ಎಪ್ಪತ್ತಕ್ಕೆ ಕಾಲಿಡಲಿರುವ ಶ್ರೀಯುತರು ವಿಜ್ಞಾನ ಮತ್ತು ಶಿಕ್ಷಣ ವಿಷಯಗಳಲ್ಲಿ ವ್ಯಾಸಂಗ ಮಾಡಿ ಪದವಿ ಪಡೆದವರು. ಮೂವತ್ತು ವರ್ಷಗಳ ಕಾಲ ಶಿಕ್ಷಕರಾಗಿ ಸೇವೆ ಸಲ್ಲಿಸಿದುದು ಅಲ್ಲದೆ ನಿವೃತ್ತರಾದ ನಂತರವೂ ಅನೇಕ ವರ್ಷಗಳು ಶಿಕ್ಷಣ ಮತ್ತು ಸಮಾಜ ಸೇವಾ ಸಂಸ್ಥೆಗಳ ಜೊತೆ ಕೈಗೂಡಿಸಿ ವಿದ್ಯಾದಾನದಲ್ಲಿ ಪಾಲ್ಗೊಂಡಿರುವವರು.

**ಎಸ್. ಶ್ರೀನಿವಾಸಯ್ಯ:** ಶ್ರೀ ಶ್ರೀನಿವಾಸಯ್ಯ ಅವರು ಶ್ರೀ ಸೂರಪ್ಪ ಮತ್ತು ಶ್ರೀಮತಿ ಸುಬ್ಬಮ್ಮ ಅವರ ಪುತ್ರರು. ವಿಜ್ಞಾನ ಮತ್ತು ಶಿಕ್ಷಣ ವಿಷಯಗಳಲ್ಲಿ ಪದವಿ ಪಡೆದ ಶ್ರೀನಿವಾಸಯ್ಯನವರು ಚಂದಾಪುರದ ಸ್ವಾಮಿ ವಿವೇಕಾನಂದ ಪ್ರೌಢಶಾಲೆಯಿಂದ ಮುಖ್ಯೋಪಾಧ್ಯಾಯರಾಗಿ ನಿವೃತ್ತಿ ಹೊಂದಿದ ನಂತರ ಇತರ ಶಿಕ್ಷಣ ಸಂಸ್ಥೆಗಳಲ್ಲಿಯೂ 48 ವರ್ಷಗಳಷ್ಟು ದೀರ್ಘಕಾಲ ಸೇವೆ ಸಲ್ಲಿಸಿರುತ್ತಾರೆ. ನಮ್ಮೆಲ್ಲರ ಈ ಬೃಹಚ್ಚರಣ ಸಂಘದ ಸಂಸ್ಥಾಪಕ ಸದಸ್ಯರಾಗಿರುವ ಶ್ರೀಯುತರು ಸುಮಾರು 35 ವರ್ಷಗಳ ಕಾಲ ಬೃಹಚ್ಚರಣ ಸಂಘದ ಗೌರವ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ಇವರು ಉತ್ತಮ ಲೇಖಕರು.

**ಟಿ.ಎಸ್. ರಮೇಶನ್:** ವಿಜ್ಞಾನ ಹಾಗೂ ಶಿಕ್ಷಣ ವಿಷಯಗಳಲ್ಲಿ ಪದವೀಧರರಾದ, ನಮ್ಮ ಈ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಟಿ.ಎಸ್. ರಮೇಶನ್ ಅವರು ಶ್ರೀ ಟಿ.ಆರ್. ಸುಬ್ಬರಾವ್ ಮತ್ತು ಶ್ರೀಮತಿ ಸರಸ್ವತಿ ಅವರ ಪುತ್ರರು. ಶ್ರೀಯುತರು ಸ್ವಾಮಿ ವಿವೇಕಾನಂದ ಪ್ರೌಢಶಾಲೆಯಲ್ಲಿ ಸುಮಾರು 34 ವರ್ಷಗಳು ಶಿಕ್ಷಕರಾಗಿ, ನಂತರ 4 ವರ್ಷಗಳು ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿದವರು. ನಿವೃತ್ತರಾದ ಮೇಲೆಯೂ ಕೆಲವು ಕಾಲ ವಿದ್ಯಾಜ್ಯೋತಿ ಪ್ರೌಢಶಾಲೆಯಲ್ಲಿ ಗಣಿತ ಮತ್ತು ವಿಜ್ಞಾನಗಳ ಬೋಧಕರಾಗಿ ಕ್ರಿಯಾಶೀಲರಾಗಿದ್ದವರು.

❖❖❖



**ಆರ್. ಗಣಪತಿ:** ಶ್ರೀ ರಾಮಸ್ವಾಮಿ ಅಯ್ಯರ್ ಅವರ ಪುತ್ರರಾದ ಶ್ರೀ ಆರ್. ಗಣಪತಿ ಅವರು ಅನೇಕಲ್ ತಾಲೂಕಿನಲ್ಲಿ ಜನಿಸಿದರು. ಭೌತ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದ ಶ್ರೀಯುತರು ಮೂವತ್ತು ವರ್ಷಗಳಿಗೂ ಹೆಚ್ಚು ಕಾಲ ಕರ್ನಾಟಕದಲ್ಲಿ ಉಪನ್ಯಾಸಕರಾಗಿ ಮತ್ತು ನೆರೆಯ ತಮಿಳುನಾಡಿನ ಶಿಕ್ಷಣ ಇಲಾಖೆಯಲ್ಲಿ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರು ಈಗ ಪುತ್ರರೊಡನೆ ಬೆಂಗಳೂರಿನಲ್ಲಿ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ.

**ಎಸ್. ಶ್ರೀನಿವಾಸನ್:** ಶ್ರೀ ಶ್ರೀನಿವಾಸನ್ ಅವರು ಶ್ರೀ ಸುಬ್ಬರಾಯ ಐಯ್ಯರ್ ಮತ್ತು ಶ್ರೀಮತಿ ನಾಗಲಕ್ಷ್ಮಿ ಅವರ ಪುತ್ರರು. 1964ರಲ್ಲಿ ಶಿಕ್ಷಕರಾಗಿ ವೃತ್ತಿಜೀವನವನ್ನು ಪ್ರಾರಂಭಿಸಿದ ಶ್ರೀನಿವಾಸನ್ ಅವರು 34 ವರ್ಷಗಳ ಕಾಲ ಸೇವೆ ಅಲ್ಲಿಸಿ ನಿವೃತ್ತರಾಗಿದ್ದಾರೆ. ಶ್ರೀಮತಿ ಸುನಂದಾ ಮತ್ತು ಶ್ರೀ ಶ್ರೀನಿವಾಸನ್ ಅವರಿಗೆ ಇಬ್ಬರು ಪುತ್ರಿಯರಿದ್ದಾರೆ.

**ಎ.ಎಂ. ಸುಬ್ರಹ್ಮಣ್ಯಂ:** ರಾಜ್ಯದ ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ಹಲವಾರು ವರ್ಷಗಳ ಕಾಲ ಸೇವೆ ಸಲ್ಲಿಸಿರುವ ಶ್ರೀ ಎ.ಎಮ್. ಸುಬ್ರಹ್ಮಣ್ಯಂ ಅವರು 1966ರಲ್ಲಿ ಎಲೆಕ್ಟ್ರಿಕಲ್ ಎಂಜಿನಿರಿಂಗ್ ವಿಷಯದಲ್ಲಿ ಪದವಿ ಗಳಿಸಿದವರು. 1967ರಲ್ಲಿ ಉದ್ಯೋಗ ಪ್ರಾರಂಭಿಸಿದ ಶ್ರೀಯುತರು 33 ವರ್ಷಗಳ ಕಾಲ ಕರ್ನಾಟಕದ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಉಪನ್ಯಾಸಕರಾಗಿ, ಇಲಾಖೆಯ ಮುಖ್ಯಸ್ಥರಾಗಿ, ಡೆಪ್ಯೂಟಿ ಡೈರೆಕ್ಟರ್ ಆಗಿ ಸೇವೆ ಸಲ್ಲಿಸಿರುವರು. ನಿವೃತ್ತಿಯ ನಂತರವೂ ಸುಮಾರು 10 ವರ್ಷಗಳ ಕಾಲ ಎಂ.ಎಸ್. ರಾಮಯ್ಯ ಪಾಲಿಟೆಕ್ನಿಕ್‌ನ ಬೆಳವಣಿಗೆಗಾಗಿ ಶ್ರಮಿಸಿರುವರು.

❖❖❖



**ಶ್ರೀಮತಿ ಜಿ.ಎನ್.ಶೀಲ:** ಶ್ರೀಮತಿ ಶೀಲಾ ಅವರು ಶ್ರೀ ಭೀಮಸೇನ ರಾವ್ ಮತ್ತು ಶ್ರೀಮತಿ ಶ್ಯಾಮಲಮ್ಮ ದಂಪತಿಗಳ ಪುತ್ರಿ ಮತ್ತು ಶ್ರೀ ಬಿ.ವಿ. ಜಯರಾಮನ್ ಅವರ ಪತ್ನಿ. ತಮಿಳುನಾಡಿನ ಅಣ್ಣಾಮಲೈ ವಿಶ್ವವಿದ್ಯಾಲಯದಿಂದ ಇಂಗ್ಲೀಷ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಗಳಿಸಿದ ಶ್ರೀಮತಿಯವರು 1977ರಿಂದ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ವಿವಿಧ ಪ್ರೌಢಶಾಲೆ ಮತ್ತು ಕಿರಿಯ ಕಾಲೇಜುಗಳಲ್ಲಿ ಶಿಕ್ಷಕರಾಗಿ ದೀರ್ಘಕಾಲ ಸೇವೆ ಸಲ್ಲಿಸಿದ್ದಾರೆ. 2015ರಲ್ಲಿ ಮುಖ್ಯಶಿಕ್ಷಕರಾಗಿ ನಿವೃತ್ತಿ ಹೊಂದಿದ್ದಾರೆ.

**ಶ್ರೀಮತಿ ಎಸ್.ಎನ್. ಜಯಲಕ್ಷ್ಮಿ :** ಶ್ರೀಮತಿ ಎಸ್.ಎನ್. ಜಯಲಕ್ಷ್ಮಿ ಅವರು ಶ್ರೀ ಎಸ್. ನಾಗರಾಜ್ ಮತ್ತು ಶ್ರೀಮತಿ ಶಾರದಮ್ಮ ಅವರ ಪುತ್ರಿಯಾಗಿ ಜನಿಸಿದರು. ಶಿಕ್ಷಕ ವೃತ್ತಿಗೆ ಅವಶ್ಯಕವಿರುವ ತರಬೇತಿ ಪಡೆದು ಶ್ರೀಮತಿಯವರು ಬೆಂಗಳೂರು ನಗರದಲ್ಲಿ ಕನ್ನಡ ಶಿಕ್ಷಕಿಯಾಗಿ ವೃತ್ತಿ ಪ್ರಾರಂಭಿಸಿದರು. 1985ರಿಂದ ರಾಜ್ಯದ ರಾಮನಗರ ತಾಲ್ಲೂಕಿನ ಗ್ರಾಮಾಂತರ ಪ್ರದೇಶದ ವಿವಿಧ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದರು. ಶ್ರೀಮತಿಯವರು ತರಗತಿಯಲ್ಲಿ ಪಾಠ ಕಲಿಸುವುದಲ್ಲದೇ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಉಪಯುಕ್ತವಾಗಬಲ್ಲ ಇತರ ಕಾರ್ಯಕ್ರಮಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಂಡವರು. ಶಾಲೆಗಳ ನಿರ್ವಹಣೆಯ ವಿವಿಧ ಅಂಗಗಳಲ್ಲಿ ಸೇವೆ ಸಲ್ಲಿಸಿ ಅಪಾರ ಅನುಭವ ಗಳಿಸಿದ್ದಾರೆ.

**ಶ್ರೀಮತಿ ಜಿ.ಎಸ್. ರುಕ್ಮಿಣಿ :** ಶ್ರೀ ಜಿ.ವಿ. ಸುಬ್ಬಣ್ಣ ಅವರ ಪತ್ನಿಯಾದ ಶ್ರೀಮತಿ ಜಿ.ಎಸ್. ರುಕ್ಮಿಣಿ ಅವರು ಸುಮಾರು 20 ವರ್ಷಗಳ ಕಾಲ ಬೆಂಗಳೂರು ಕುಮಾರ ಪಾರ್ಕ್‌ನ ಶ್ರೀ ಲಕ್ಷ್ಮಿ ವಿದ್ಯಾಲಯದಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದ್ದಾರೆ. ಒಳ್ಳೆಯ, ಕರ್ತವ್ಯ ಪ್ರಜ್ಞೆಯುಳ್ಳ ಶಿಕ್ಷಕಿ ಎಂದು ಶ್ರೀಮತಿಯವರು ಶಾಲೆಯ ಆಡಳಿದ ಮೆಚ್ಚುಗೆ ಗಳಿಸಿರುವವರು.

**ಶ್ರೀಮತಿ ಜಿ.ಎಸ್. ಗೌರಮ್ಮ :** ಶ್ರೀಮತಿ ಜಿ.ಎಸ್. ಗೌರಮ್ಮನವರು ಯಮಲೂರಿನ ಶ್ರೀ ಶ್ರೀನಿವಾಸಯ್ಯ ಮತ್ತು ಶ್ರೀಮತಿ ಶಾರದಮ್ಮ ಅವರ ಪುತ್ರಿಯಾಗಿ 1929ರಲ್ಲಿ ಜನಿಸಿದರು. ಉಪಾಧ್ಯಾಯ ತರಬೇತಿಯನ್ನು

ಪಡೆದಿರುವ ಶ್ರೀಮತಿಯವರು ಬೆಂಗಳೂರಿನ ವಿವಿಧ ಶಾಲೆಗಳಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದ್ದಾರೆ. ಸಂಗೀತವನ್ನು ಪ್ರವೃತ್ತಿಯನ್ನಾಗಿಸಿಕೊಂಡಿರುವ ಶ್ರೀಮತಿಯವರಿಗೆ ಮೂವರು ಪುತ್ರರು ಮತ್ತು ಇಬ್ಬರು ಪುತ್ರಿಯರು ಇದ್ದಾರೆ.

**ಶ್ರೀಮತಿ ಬಿ.ಎಸ್. ರತ್ನ :** ಶ್ರೀಮತಿ ಬಿ.ಎಸ್. ರತ್ನ ಅವರು ಬೂದಿಗೆರೆ ಸುಬ್ಬರಾಯರು ಮತ್ತು ಜಾನಕಮ್ಮನವರ ಕೊನೆಯ ಪುತ್ರಿ. ಶಿಕ್ಷಕ ತರಬೇತಿ ಪಡೆದ ಶ್ರೀಮತಿಯವರು ಎಚ್.ಎ.ಎಲ್. ಸಂಸ್ಥೆಯ ವಿದ್ಯಾಶಾಲೆಯಲ್ಲಿ ಉಪಾಧ್ಯಾಯಿನಿಯಾಗಿ ಮೂವತ್ತಮೂರುವರ್ಷಗಳು ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಇವರ ನಿಸ್ಪೃಹ ಸೇವೆಯನ್ನು ಗುರುತಿಸಿ ಬೆಂಗಳೂರು ತಾಲ್ಲೂಕು ಉಪಾಧ್ಯಾಯರ ಸಂಘವು ಇವರನ್ನು ಉತ್ತಮ ಶಿಕ್ಷಕಿ ಎಂದು ಸನ್ಮಾನಿಸಿದೆ.

**ಶ್ರೀಮತಿ ಸೀತಾಭಾರತಿ:** ಶ್ರೀಮತಿ ಸೀತಾಭಾರತಿ ಅವರು 1949ರಲ್ಲಿ ಶ್ರೀ ಭೀಮೇಶ್ವರ್ ಮತ್ತು ಶ್ರೀಮತಿ ಶಾರದಮ್ಮ ದಂಪತಿಗಳ ಪುತ್ರಿಯಾಗಿ ಜನಿಸಿದರು. ಭೌತಶಾಸ್ತ್ರದಲ್ಲಿ ಡಾಕ್ಟರೇಟ್ ಪದವಿ ಗಳಿಸಿರುವ ಶ್ರೀಮತಿಯವರು ನಗರದ ಪ್ರತಿಷ್ಠಿತ ಎಮ್.ಎಸ್. ರಾಮಯ್ಯ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ 24 ವರ್ಷಗಳಷ್ಟು ಕಾಲ ಸೇವೆ ಸಲ್ಲಿಸಿದ್ದಾರೆ. ಅಲ್ಲದೇ ನಗರದ ಭಾರತೀಯ ವಿಜ್ಞಾನ ಸಂಸ್ಥೆ, ಪುಣೆಯಲ್ಲಿರುವ, ನ್ಯಾಷನಲ್ ಕೆಮಿಕಲ್ ಲ್ಯಾಬೋರೇಟರಿ ಮತ್ತು ಅಮೇರಿಕದ ಸ್ಯಾನ್ ಯೋಸ್ ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಿದ್ದಾರೆ.

❖❖❖




**ನಿರ್ಮಲಾ ಸತ್ಯಮೂರ್ತಿ:** ಶ್ರೀಮತಿ ನಿರ್ಮಲಾ ಸತ್ಯಮೂರ್ತಿ ಅವರು ಅಟ್ಟೂರು ಶ್ರೀ ವೆಂಕಟಾಚಲಪತಿ ಮತ್ತು ಶ್ರೀಮತಿ ಲಲಿತಮ್ಮನವರ ಕಿರಿಯ ಪುತ್ರಿ. ಬಾಲ್ಯ ವಿದ್ಯಾಭ್ಯಾಸವನ್ನು ಮೈಸೂರಿನಲ್ಲಿ ನಡೆಸಿದ ಇವರು ಬೆಂಗಳೂರು ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದವರು. ನಗರದ ಸರಸ್ವತಿ ವಿದ್ಯಾಮಂದಿರದಲ್ಲಿ ವಿಜ್ಞಾನ ಶಿಕ್ಷಕಿಯಾಗಿ, ಮುಖ್ಯೋಪಾಧ್ಯಾಯಿನಿಯಾಗಿ, ನಂತರ ಚಾಮರಾಜಪೇಟೆ ಎಜುಕೇಷನ್ ಸೊಸೈಟಿ ವಿದ್ಯಾ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿರುತ್ತಾರೆ. 37 ವರ್ಷಗಳ ಸೇವಾ ಅವಧಿಯ ನಂತರ ಈಗ ಸಂತೃಪ್ತ ಗೃಹಿಣಿಯಾಗಿ ನಿವೃತ್ತ ಜೀವನ ನಡೆಸುತ್ತಿದ್ದಾರೆ.

**ಶ್ರೀಮತಿ ಎ.ವಿ. ನಳಿನ:** ಶ್ರೀಮತಿ ಎ.ವಿ. ನಳಿನ ಅವರು ಶ್ರೀಮತಿ ನಿರ್ಮಲಾ ಸತ್ಯಮೂರ್ತಿ ಅವರ ಹಿರಿಯ ಸಹೋದರಿ. ಬೆಂಗಳೂರು ವಿಶ್ವವಿದ್ಯಾಲಯದಿಂದ ಭೌತಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದ ಶ್ರೀಮತಿಯವರು ವಿಶ್ವೇಶ್ವರಪುರದ ವಿಜ್ಞಾನ ಕಾಲೇಜಿನಲ್ಲಿ ವೃತ್ತಿ ಜೀವನವನ್ನು ಪ್ರಾರಂಭಿಸಿ ಕಾಲಕ್ರಮೇಣ ರೀಡರ್, ಪ್ರೊಫೆಸರ್ ಹುದ್ದೆಗೇರಿದವರು. 32 ವರ್ಷಗಳ ದೀರ್ಘ ಸೇವೆಯ ನಂತರ 1998ರಲ್ಲಿ ಆ ವಿದ್ಯಾಸಂಸ್ಥೆಯ ಪ್ರಾಂಶುಪಾಲರಾಗಿ 1998ರಲ್ಲಿ ನಿವೃತ್ತರಾದರು.

**ಶ್ರೀಮತಿ ವಿಜಯಶ್ರೀ:** ಶ್ರೀಮತಿ ವಿಜಯಶ್ರೀ ಅವರು ಶ್ರೀಮತಿ ಎ.ವಿ. ನಳಿನ ಮತ್ತು ನಿರ್ಮಲಾ ಸತ್ಯಮೂರ್ತಿ ಅವರ ಸಹೋದರಿ ಮತ್ತು ಶ್ರೀ ಸತ್ಯನಾರಾಯಣ ಅವರ ಪತ್ನಿ. ಬೆಂಗಳೂರು ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದಿರುವ ಶ್ರೀಮತಿಯವರು 32 ವರ್ಷಗಳ ಕಾಲ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದ್ದಾರೆ. ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಇವರ ಕೊಡುಗೆಯನ್ನು ಕರ್ನಾಟಕ ಗಣಿತ ಅಕಾಡೆಮಿಯು ಪುರಸ್ಕರಿಸಿದೆ. ತಮ್ಮ ವೃತ್ತಿಯ ಜೊತೆಗೆ, ಶ್ರೀಮತಿಯವರು ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳ ಶೈಕ್ಷಣಿಕ ಉನ್ನತಿಗೋಸ್ಕರ ಕೊಡುಗೆ ನೀಡಿದ್ದಾರೆ. ನಿವೃತ್ತರಾದ ಮೇಲೆಯೂ ಶ್ರೀಮತಿಯವರು ಅರ್ಹ ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾಭ್ಯಾಸ ನೀಡುವ ಮೂಲಕ ತಮ್ಮಲ್ಲಿರುವ ಸಂಪನ್ಮೂಲವನ್ನು ಸಾರ್ಥಕ ಪಡಿಸಿಕೊಳ್ಳುತ್ತಿದ್ದಾರೆ.

**ಬಿ.ಇ. ಸೀತಾಲಕ್ಷ್ಮಿ :** ಶ್ರೀಮತಿ ಸೀತಾಲಕ್ಷ್ಮಿ ಅವರು ಕನ್ನಡದಲ್ಲಿ ಸ್ನಾತಕೋತ್ತರ ಪದವಿ ಪಡೆದವರು. ಅಲ್ಲದೇ ಹಿಂದಿ ಭಾಷಾ ವ್ಯಾಸಂಗ ಮಾಡಿರುವವರು. ನಂತರ 33 ವರ್ಷಗಳ ಕಾಲ ಎಚ್.ಎಮ್.ಟಿ. ಪ್ರೌಢಶಾಲೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿದಾರೆ. ಶ್ರೀಮತಿಯವರಿಗೆ ಒಬ್ಬ ಪುತ್ರಿ ಮತ್ತು ಒಬ್ಬ ಪುತ್ರರಿದ್ದಾರೆ.

**ಶ್ರೀಮತಿ ಸಿ. ವಸಂತ:** ಶ್ರೀಮತಿ ವಸಂತ ಅವರು ಕಾಚರಕನಹಳ್ಳಿ ಶ್ರೀ ಛಾಯಾಪತಿ ಮತ್ತು ಶ್ರೀಮತಿ ಕೃಷ್ಣವೇಣಿ ದಂಪತಿಗಳ ಪುತ್ರಿ. ಶ್ರೀಮತಿಯವರು ಶಿಕ್ಷಕ ತರಬೇತಿಯ ನಂತರ ನಗರದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಸುಮಾರು 38 ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಇವರ ಸೇವೆಯನ್ನು ಗುರುತಿಸಿ ಶಿಕ್ಷಣ ಸಂಸ್ಥೆಗಳು ಇವರಿಗೆ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿ ನೀಡಿ ಗೌರವಿಸಿವೆ. ಶ್ರೀಮತಿಯವರು ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಹಾಡುಗಾರಿಕೆಯನ್ನು ಪ್ರವೃತ್ತಿಯನ್ನಾಗಿಸಿಕೊಂಡಿದ್ದಾರೆ. ಶ್ರೀ ವೆಂಕಟೇಶಮೂರ್ತಿ ಅವರ ಪತ್ನಿಯಾದ ಶ್ರೀಮತಿಯವರಿಗೆ ಇಬ್ಬರು ಪುತ್ರರಿದ್ದಾರೆ.



**ಶ್ರೀಮತಿ ಬಿ.ಎಸ್. ನಾಗರತ್ನ:** ಶ್ರೀಮತಿ ಬಿ.ಎಸ್. ನಾಗರತ್ನ ಅವರು ಶ್ರೀ ಸೋಮಸುಂದರಂ ಮತ್ತು ಶ್ರೀಮತಿ ಸಾವಿತ್ರಮ್ಮ ದಂಪತಿಗಳ ಪುತ್ರಿ. ಸ್ನಾತಕೋತ್ತರ ಪದವೀಧರೆಯಾದ ಶ್ರೀಮತಿಯವರು ರಾಯಚೂರು ಮತ್ತು ಬೆಂಗಳೂರಿನ ಪ್ರತಿಷ್ಠಿತ ಕಾಲೇಜುಗಳಲ್ಲಿ ಪ್ರಾಧ್ಯಾಪಕಿಯಾಗಿ, ಜೂಆಲಜಿ ವಿಭಾಗದ ಮುಖ್ಯಸ್ಥರಾಗಿ ಕೆಲಸ ನಿರ್ವಹಿಸಿದರು. 1996ರಲ್ಲಿ ಸೇವೆಯಿಂದ ನಿವೃತ್ತರಾದಮೇಲೆಯೂ ಶ್ರೀಮತಿಯವರು ಬಿ.ಎಮ್.ಎಸ್. ಮಹಿಳಾ ಕಾಲೇಜಿನಲ್ಲಿ ಗೌರವ ಪ್ರಾಧ್ಯಾಪಕರಾಗಿ 3 ವರ್ಷ ಸೇವೆ ಸಲ್ಲಿಸಿದ್ದಾರೆ.

❖❖❖

## ಅಭಿನಂದನೆ

ಸಂಘದ ಸದಸ್ಯ ವಿದ್ವಾನ್ ಶ್ರೀ ಕಾರ್ತಿಕ್‌ರವರು ಭಾರತೀಯ ಆಕಾಶವಾಣಿ/ದೂರದರ್ಶನದ 'ಎ' ಶ್ರೇಣಿ ಖಂಜಿರಾ ಲಯವಾದ್ಯ ಕಲಾವಿದರಾಗಿ ಆಯ್ಕೆಯಾಗಿರುವುದಕ್ಕೆ ಸಂಘ ಅಭಿನಂದಿಸುತ್ತದೆ.





**ಶ್ರೀಮತಿ ಕೆ.ಸಿ. ಸರಸ್ವತಿ ರಾಮಚಂದ್ರ:** ಶ್ರೀಮತಿ ಸರಸ್ವತಿ ರಾಮಚಂದ್ರ ಅವರು ಕಾಚರಕನಹಳ್ಳಿಯ ಶ್ರೀ ಛಾಯಾಪತಿ ಮತ್ತು ಶ್ರೀಮತಿ ವರಲಕ್ಷ್ಮಿ ದಂಪತಿಗಳ ಪುತ್ರಿ. ಸುಮಾರು 38 ವರ್ಷಗಳಷ್ಟು ದೀರ್ಘಕಾಲ ಮೈಸೂರಿನ ಹೇಮಾವತಿ ಹಿರಿಯ ಪ್ರಾಥಮಿಕ ಶಾಲೆ, ಬೆಂಗಳೂರಿನ ಕುಮಾರಸ್ವಾಮಿ ವಿದ್ಯಾಮಂದಿರ ಮತ್ತು ಮಹಾನಗರಪಾಲಿಕೆಯ ಶಾಲೆಗಳಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದ್ದಾರೆ. ತಮ್ಮ ನಿಸ್ಪೃಹ ಸೇವೆಗಾಗಿ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿ ಪಡೆದಿದ್ದಾರೆ. ಸಂಘದ ಸದಸ್ಯ ಶ್ರೀ ರಾಮಚಂದ್ರ ಅವರ ಪತ್ನಿಯಾದ ಶ್ರೀಮತಿ ಸರಸ್ವತಿಯವರಿಗೆ ಒಬ್ಬ ಪುತ್ರಿ ಇದ್ದಾರೆ.

**ಜೆ.ಎಸ್. ಇಂದಿರಾ:** ಸ್ನಾತಕೋತ್ತರ ಪದವೀಧರೆಯಾದ ಶ್ರೀಮತಿ ಜೆ.ಎಸ್.ಇಂದಿರಾ ಅವರು 1950ರಲ್ಲಿ ಜನಿಸಿದವರು. ಸ್ನಾತಕೋತ್ತರ ಪದವಿಯಲ್ಲದೇ ಇಂಗ್ಲಿಷ್ ಮತ್ತು ರಶ್ಯನ್ ಭಾಷಾ ವ್ಯಾಸಂಗದಲ್ಲಿ ಪೋಸ್ಟ್ ಗ್ರಾಜ್ಯುಯೇಟ್ ಡಿಪ್ಲೊಮಾ ಗಳಿಸಿರುವ ಶ್ರೀಮತಿಯವರು ಪ್ರತಿಷ್ಠಿತ ವಿದ್ಯಾಸಂಸ್ಥೆಗಳಲ್ಲದೆ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದಲ್ಲಿಯೂ ಸೇವೆ ಸಲ್ಲಿಸಿದ್ದಾರೆ. ಅಲ್ಲದೇ ಮೈಸೂರು ವಿಶ್ವವಿದ್ಯಾಲಯದಲ್ಲಿನ ಸಂಶೋಧನಾ ಚಟುವಟಿಕೆಗಳಲ್ಲಿ ಪಾಲ್ಗೊಂಡಿದ್ದಾರೆ. ಜೊತೆಗೆ ಆಲ್ ಇಂಡಿಯ ಇನ್ಸ್ಟಿಟ್ಯೂಟ್ ಆಫ್ ಸ್ಪೀಚ್ ಅಂಡ್ ಹಿಯರಿಂಗ್ ಸಂಸ್ಥೆಯ ಯೋಜನೆ ಗಳಿಗೆ ಸೇವೆ ಸಲ್ಲಿಸಿದ್ದಾರೆ. ಇಂಗ್ಲೀಷ್ ಮತ್ತು ಕನ್ನಡದ ದೈನಿಕ, ವಾರಪತ್ರಿಕೆಗಳಲ್ಲಿ ಇವರ ಲೇಖನಗಳು ಪ್ರಕಟವಾಗಿವೆ. ಇವರು ಜಗದಾಪುರ ಡಾ. ಸುಬ್ರಹ್ಮಣ್ಯಂ ಹಾಗೂ ಶ್ರೀಮತಿ ಲಲಿತಮ್ಮನವರ ಪುತ್ರಿ.

**ಶ್ರೀಮತಿ ಎಚ್. ಪಿ. ಸೂರ್ಯಕುಮಾರಿ :** ಶ್ರೀಮತಿ ಸೂರ್ಯಕುಮಾರಿ ಅವರು ಶ್ರೀ ಪರಮಶಿವಯ್ಯ ಮತ್ತು ಶ್ರೀಮತಿ ಜ್ಞಾನಾಂಬ ದಂಪತಿಗಳ ಪುತ್ರಿ. ಶಿಕ್ಷಕ ವೃತ್ತಿಗೆ ತರಬೇತಿ ಪಡೆದ ಶ್ರೀಮತಿಯವರು 1980ರಿಂದ ಸುಮಾರು 28 ವರ್ಷಗಳ ಕಾಲ ಬೆಂಗಳೂರು ನಗರ ಹಾಗೂ ಗ್ರಾಮಾಂತರ ಪ್ರದೇಶಗಳ ವಿವಿಧ ಶಾಲೆಗಳಲ್ಲಿ ಶಿಕ್ಷಕಿಯಾಗಿ ನಿಸ್ಪೃಹ ಸೇವೆ ಸಲ್ಲಿಸಿದ್ದಾರೆ. ಪದ್ಮನಾಭನಗರದಲ್ಲಿ ಒಂದು ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸುವ ನಿಟ್ಟಿನಲ್ಲಿ ಶ್ರೀಮತಿಯವರು ಪಟ್ಟ ಶ್ರಮದ ಫಲವಾಗಿ ಇಂದು ಸಹಕಾರಿ ವಿದ್ಯಾಕೇಂದ್ರ ಶಾಲೆಯು ಹಿರಿದಾಗಿ ಬೆಳೆದಿದೆ. ಪತಿ ಶ್ರೀ ರಾಜಾಪುರದ ಭಗವಾನ್ ಹಾಗೂ ಮಕ್ಕಳು ಸಂಘದ ಸದಸ್ಯರೆಂಬುದು ಹಿರಿಮೆ.

**ಶ್ರೀಮತಿ ವೆಂಕಟಲಕ್ಷಮ್ಮ:** ಶ್ರೀಮತಿ ವೆಂಕಟಲಕ್ಷಮ್ಮ ಅವರು ಕಾಚರಕನಹಳ್ಳಿ ಶ್ರೀ ಸಂಪಂಗಿರಾಮನ್ ಅವರ ಪತ್ನಿ. ಪ್ರಸ್ತುತ ರಾಮನಗರದಲ್ಲಿ ವಾಸವಾಗಿರುವ ಶ್ರೀಮತಿಯವರು ಹಿಂದಿ 'ವಿಶಾರದ' ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಶಿಕ್ಷಣ ವೃತ್ತಿಯನ್ನು ಕೈಗೊಂಡವರು. ಮೈಸೂರು, ಶಿವಮೊಗ್ಗ ಮತ್ತು ಬೆಂಗಳೂರು ಜಿಲ್ಲೆಗಳ ಶಾಲೆಗಳಲ್ಲಿ 1965ರಿಂದ ಸುಮಾರು 38 ವರ್ಷಗಳ ದೀರ್ಘಕಾಲ ಹಿಂದಿ ಭಾಷಾ ಶಿಕ್ಷಕಿಯಾಗಿ ಸೇವೆ ಸಲ್ಲಿಸಿ 2003 ರಲ್ಲಿ ನಿವೃತ್ತರಾಗಿದ್ದಾರೆ. ಇವರಿಗೆ ಒಬ್ಬ ಪುತ್ರಿ ಇದ್ದು, ಅಳಿಯ ಗಡಿರಕ್ಷಣಾಪಡೆಯ ಸೇವೆ ಸಲ್ಲಿಸುತ್ತಿದ್ದಾರೆ.

❖❖❖

**ಅರುಣಮೂರ್ತಿ :** ಶ್ರೀ ಶ್ರೀನಿವಾಸಮೂರ್ತಿ ಅವರ ಪತ್ನಿಯವರಾದ ಶ್ರೀಮತಿ ಅರುಣ ಮೂರ್ತಿ ಅವರು 1972ರಲ್ಲಿ ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿ ಪಡೆದವರು. ಇವರು ನೆಲಮಂಗಲದ ಸರ್ಕಾರಿ ಕಾಲೇಜು, ನಂತರ ರಾಜಾಜಿನಗರದ ವಿವೇಕಾನಂದ ಕಾಲೇಜುಗಳಲ್ಲಿ ಸಂಸ್ಕೃತದ ಉಪನ್ಯಾಸಕಿಯಾಗಿ ಸೇವೆ ಸಲ್ಲಿಸಿ 2012ರಲ್ಲಿ ನಿವೃತ್ತಿ ಹೊಂದಿರುತ್ತಾರೆ.

**ನರಸು ರಾಮಚಂದ್ರ :** ಶ್ರೀಮತಿ ನರಸು ರಾಮಚಂದ್ರ ಅವರು ಮೈಸೂರು ವಿಶ್ವಾವಿದ್ಯಾಲಯದಲ್ಲಿ ವ್ಯಾಸಂಗಮಾಡಿ ಹಿಂದಿ ಭಾಷಾ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಗಳಿಸಿದ್ದಾರೆ. ನಗರದ ಪ್ರತಿಷ್ಟಿತ ವಿದ್ಯಾಸಂಸ್ಥೆಗಳಲ್ಲಿ ಹಿಂದಿ ಭಾಷೆಯ ಶಿಕ್ಷಕಿಯಾಗಿ, ಉಪನ್ಯಾಸಕಿಯಾಗಿ, ಸೇವೆ ಸಲ್ಲಿಸಿರುವ ಇವರು ಕರ್ನಾಟಕ ಹಿಂದಿ ಪ್ರಚಾರ ಸಮಿತಿಯ ಅಂಗಸಂಸ್ಥೆಯಾದ ಹಿಂದಿ ಶಿಕ್ಷಕ ತರಬೇತಿ ಮಹಾವಿದ್ಯಾಲಯದ ಪ್ರಾಂಶುಪಾಲರಾಗಿ 20 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ.

ತಮ್ಮ ವೃತ್ತಿಜೀವನದ ಅವಧಿಯಲ್ಲಿ ಹಿಂದಿಗೆ ಅನ್ಯ ಭಾಷಾ ಕೃತಿಗಳ ತರ್ಜುಮೆ, ಹಿಂದಿ ವ್ಯಾಕರಣದ ವಿಷಯದಲ್ಲಿ ರೇಡಿಯೋ ಕಾರ್ಯಕ್ರಮ, ಹಿಂದಿ ಭಾಷೆಯ ಸಂಪನ್ಮೂಲ ವ್ಯಕ್ತಿಯಾಗಿ ಇತರ ಸಂಸ್ಥೆಗಳಲ್ಲಿ ಬೋಧನೆ, ಹಿಂದಿ ವಿದ್ವತ್ ಪರೀಕ್ಷೆಯ ಮೌಲ್ಯಮಾಪನೆ ಮುಂತಾದ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಶ್ರೀಮತಿಯವರು ಹಿಂದಿ ಭಾಷೆಯ ಪ್ರಸರಣಕ್ಕಾಗಿ ಅಮೂಲ್ಯ ಕೊಡುಗೆ ನೀಡಿದ್ದಾರೆ. ಈಗ ವಿಶ್ರಾಂತಿ ಜೀವನದಲ್ಲಿ ಹೊಲಿಗೆ ಮತ್ತು ಕಸೂತಿ ಹವ್ಯಾಸವನ್ನು ರೂಢಿಸಿಕೊಳ್ಳುತ್ತಾ ತಮ್ಮಲ್ಲಿ ಮನೆಮಾಡಿರುವ ಪ್ರವೃತಿಯನ್ನು ಬೆಳೆಸಿಕೊಳ್ಳುತ್ತಿದ್ದಾರೆ.

**ಶ್ರೀಮತಿ ರಾಜಲಕ್ಷ್ಮಿ :** ಶಿಕ್ಷಣ ಕ್ಷೇತ್ರದಲ್ಲಿ ಅಪಾರ ಸಾಧನೆ ಮಾಡಿರುವ ಶ್ರೀಮತಿ ರಾಜಲಕ್ಷ್ಮಿ ಅವರು 1952ರಲ್ಲಿ ಜನಿಸಿದವರು. ಇಂಗ್ಲೀಷ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಗಳಿಸಿರುವ ಶ್ರೀಮತಿಯವರು ನಗರದ ಬಿ.ಎಂ.ಎಸ್. ಇಂಜಿನೀರಿಂಗ್ ಕಾಲೇಜು ಮತ್ತು ವಾಸವಿ ವಿದ್ಯಾನಿಕೇತನ ಪದವಿ ಕಾಲೇಜಿನಲ್ಲಿ ಇಂಗ್ಲೀಷ್ ಭಾಷಾ ಉಪನ್ಯಾಸಕರಾಗಿ, ಸಹ ಪ್ರಾಧ್ಯಾಪಕರಾಗಿ ಮತ್ತು ವಿಭಾಗದ ಮುಖ್ಯಸ್ಥರಾಗಿ 35 ವರ್ಷಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿದ್ದಾರೆ.

ಇದಲ್ಲದೇ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಪಠ್ಯಪುಸ್ತಕ ಸಮಿತಿಯ ಸದಸ್ಯರಾಗಿ, ಪರೀಕ್ಷಾ ಮಂಡಳಿಯ ಸದಸ್ಯರಾಗಿ, ಅಧ್ಯಯನ ಮಂಡಳಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಉಪಯೋಗವಾಗುತ್ತಿರುವ ಪಠ್ಯಪುಸ್ತಕಗಳ ರಚನೆಗೆ ಶ್ರೀಮತಿಯವರು ಕೈಗೂಡಿಸಿದ್ದಾರೆ. ರಾಮನ್ ಸಂಶೋಧನಾ ಸಂಸ್ಥೆ, ಅಣು ಶಕ್ತಿ ಆಯೋಗ, ಬಾಪ್ಟಿಸ್ಟ್ ಮಿಷನ್ ಹಾಸ್ಪಿಟಲ್ ಮುಂತಾದ ಸಂಸ್ಥೆಗಳಲ್ಲಿ ಇಂಗ್ಲೀಷ್ ಭಾಷಾ ತರಬೇತಿ ನೀಡಿದ್ದಾರೆ.

ಶ್ರೀಮತಿಯವರು ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಸಂಶೋಧನಾ ಯೋಜನೆಯಲ್ಲಿ ಸೇವೆ ಸಲ್ಲಿಸಿದಾರೆ. ಅಲ್ಲದೇ ಅಂತರ ರಾಷ್ಟ್ರೀಯ, ರಾಷ್ಟ್ರೀಯ, ರಾಜ್ಯ ಮಟ್ಟದ ಸಮಾವೇಶಗಳಲ್ಲಿ ಪ್ರಬಂಧಗಳನ್ನು ಮಂಡಿಸಿದ್ದಾರೆ.

ಸಾಹಿತ್ಯ ಕ್ಷೇತ್ರದಲ್ಲಿ ಸಕ್ರಿಯರಾಗಿರುವ ಶ್ರೀಮತಿಯವರು ಬಂಗಾಳದ ಖ್ಯಾತ ಲೇಖಕಿ ಮತ್ತು ಸಾಮಾಜಿಕ ಕಾರ್ಯಕರ್ತೆಯಾಗಿದ್ದ ಮಹಾಶ್ವೇತಾ ದೇವಿ ಅವರ ಇಂಗ್ಲಿಷ್ ಕೃತಿಯನ್ನು ಕನ್ನಡಕ್ಕೆ ಭಾಷಾಂತರ ಮಾಡಿದ್ದಾರೆ. ಇವರ ಹಲವಾರು ಲೇಖನಗಳು ಪ್ರತಿಷ್ಠಿತ ದಿನಪತ್ರಿಕೆಗಳು ಮತ್ತು ಮ್ಯಾಗಜೀನ್‌ಗಳಲ್ಲಿ ಪ್ರಕಟವಾಗಿವೆ.

ಶ್ರೀಮತಿಯವರ ಇಂಗ್ಲಿಷ್ ಭಾಷಾ ಪ್ರತಿಭೆ ಕನ್ನಡ ಚಲನಚಿತ್ರ ಕ್ಷೇತ್ರದಲ್ಲಿಯೂ ವ್ಯಕ್ತವಾಗಿದೆ. ಟಿ.ಎಸ್. ನಾಗಾಭರಣ ಅವರ ನಿರ್ಮಾಣದ, ಪ್ರಶಸ್ತಿ ವಿಜೇತ ಚಲನಚಿತ್ರ ಮತ್ತು ಸಾಹಿತಿ ಆದ್ಯರಂಗಾಚಾರ್ಯ ಅವರ ಬಗೆಗೆ ಕರ್ನಾಟಕ ಸರ್ಕಾರಕ್ಕಾಗಿ ನಿರ್ಮಿಸಿದ ಡಾಕ್ಯುಮೆಂಟರಿ ಚಲನಚಿತ್ರಗಳಿಗೆ ಶ್ರೀಮತಿಯರು ಇಂಗ್ಲೀಷ್ ಸಬ್ ಟೈಟಲ್ಸ್ ರೂಪಿಸಿಕೊಟ್ಟಿದ್ದಾರೆ.

**ಆರ್. ಜಿ. ವಸಂತಕುಮಾರಿ :** ಶ್ರೀ ಆರ್. ಗೋಪಾಲರಾವ್ ಮತ್ತು ಶ್ರೀಮತಿ ಶಕುಂತಲಾ ಅವರ ಪುತ್ರಿಯಾದ ಶ್ರೀಮತಿ ಆರ್. ಜಿ. ವಸಂತ ಕುಮಾರಿ ಅವರು 1970ರಲ್ಲಿ ಕನ್ನಡ ಭಾಷೆಯಲ್ಲಿ ಸ್ನಾತಕೋತ್ತರ ಪದವಿ ಗಳಿಸಿದರು. ವಿವಿಧ ಕಾಲೇಜುಗಳಲ್ಲಿ ಉಪನ್ಯಾಸಕಿಯಾಗಿ, ಪ್ರಾಧ್ಯಾಪಕಿಯಾಗಿ ಸೇವೆ ಸಲ್ಲಿಸಿದ್ದಾರೆ. ಇದಲ್ಲದೇ ವಿಶ್ವವಿದ್ಯಾಲಯದ ಮತ್ತು ಕರ್ನಾಟಕ ಲೋಕಸೇವಾ ಆಯೋಗದ ಅನೇಕ ಪರೀಕ್ಷೆಗಳಲ್ಲಿ ಮೌಲ್ಯಮಾಪಕಿಯಾಗಿ ಸೇವೆ ಸಲ್ಲಿಸಿದ್ದಾರೆ. ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಚಟುವಟಿಕೆಗಳಲ್ಲಿ ಶ್ರೀಮತಿಯವರು ಪಾಲ್ಗೊಂಡಿದ್ದಾರೆ. ಸುಮಾರು 33 ವರ್ಷಗಳ ಸೇವೆಯ ನಂತರ 2003ರಲ್ಲಿ ಶ್ರೀಮತಿಯವರು ಸ್ವಯಂನಿವೃತ್ತಿ ಪಡೆದಿದ್ದಾರೆ.

❖❖❖



**ಎಸ್.ಕೆ.ಕೃಷ್ಣವೇಣಿ:** ಶ್ರೀಮತಿ ಕೃಷ್ಣವೇಣಿ ಅವರು ಸರ್ಜಾಪುರದ ಶಿವಪೂಜೆ ಕೃಷ್ಣಮೂರ್ತಿ ಮತ್ತು ಬಿನ್ನಮಂಗಲದ ಶ್ರೀಮತಿ ಜಯಮ್ಮ ದಂಪತಿಗಳ ಪುತ್ರಿ ಮತು ಶ್ರೀ ಎಲ್. ವೆಂಕಟರಾಮನ್ ಅವರ ಪತ್ನಿ. ಶಿಕ್ಷಕಿಯಾಗಿ ತರಬೇತಿ ಪಡೆದುಕೊಂಡ ಶ್ರೀಮತಿಯವರು ಬೆಂಗಳೂರಿನ ಭಾರತಮಾತಾ ವಿದ್ಯಾಸಂಸ್ಥೆಯಲ್ಲಿ ಶಿಕ್ಷಕಿಯಾಗಿ 38 ವರ್ಷಗಳ ಕಾಲ ಸೇವೆ ಸಲ್ಲಿಸಿ 2005ರಲ್ಲಿ ನಿವೃತ್ತಿಯಾಗಿದ್ದಾರೆ.

**ಶ್ರೀಮತಿ ಎಸ್.ಕೆ. ಶಾಂತ:** ಶ್ರೀಮತಿ ಎಸ್.ಕೆ. ಶಾಂತ ಅವರು ಶ್ರೀಮತಿ ಕೃಷ್ಣವೇಣಿ ಅವರ ಸಹೋದರಿ. ತಂದೆ, ತಾಯಂದಿರ ಪ್ರೋತ್ಸಾಹದ ಬಲದಿಂದ ಶಿಕ್ಷಕ ತರಬೇತಿ ಪಡೆದುಕೊಂಡ ನಂತರ ಭಾರತಮಾತಾ ವಿದ್ಯಾಸಂಸ್ಥೆಯಲ್ಲಿ ಶಿಕ್ಷಕಿಯಾಗಿ ವರ್ಷ ಸೇವೆ ಸಲ್ಲಿಸಿದರು. ವೃತ್ತಿ ಜೀವನ ಪ್ರಾರಂಭಿಸಿದ 7–8 ವರ್ಷಗಳ ನಂತರ ವೃತ್ತಿಯ ಜೊತೆಗೇ ವ್ಯಾಸಂಗವನ್ನು ಮುಂದುವರೆಸಿ ಕಲಾ ವಿಭಾಗದಲ್ಲಿ ಪದವಿ ಗಳಿಸಿದರು. ಸುಮಾರು 38 ವರ್ಷಗಳ ಸೇವೆ ಸಲ್ಲಿಸಿ 2009ರಲ್ಲಿ ನಿವೃತ್ತಿಯಾಗಿದ್ದಾರೆ. ಶ್ರೀಮತಿಯವರಿಗೆ ಒಬ್ಬ ಪುತ್ರಿ ಇದ್ದಾರೆ.

**ಎಸ್.ಕೆ. ಸ್ವರ್ಣ:** ಶ್ರೀಮತಿ ಕೃಷ್ಣವೇಣಿ ಮತ್ತು ಶಾಂತ ಅವರ ಸಹೋದರಿಯಾದ ಶ್ರೀಮತಿ ಸ್ವರ್ಣ ಅವರು 1944ರಲ್ಲಿ ಜನಿಸಿದವರು. ಸಹೋದರಿಯರಂತೆಯೇ ಇವರೂ ಶಿಕ್ಷಕಿಯಾಗಿ ತರಬೇತಿ ಪಡೆದು ಸುಮಾರು 10 ವರ್ಷಗಳು ಭಾರತಮಾತಾ ವಿದ್ಯಾಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ್ದಾರೆ. ದಿ॥ ಅನಂತಪದ್ಮನಾಭ ಅವರ ಪತ್ನಿಯಾದ ಶ್ರೀಮತಿಯವರಿಗೆ ಒಬ್ಬ ಪುತ್ರರಿದ್ದಾರೆ.

**ಎಚ್.ಎಲ್. ಗೀತಾ:** ಶಿಕ್ಷಕ ವೃತ್ತಿಯನ್ನು ಕೈಗೊಂಡು ಅದರಿಂದಲೇ ಅತ್ಯಂತ ಸಂತೋಷ, ನೆಮ್ಮದಿ, ತೃಪ್ತಿಯನ್ನು ಪಡೆದಿರುವ ಶ್ರೀಮತಿ ಎಚ್. ಎಲ್. ಗೀತಾ ಅವರು ಶ್ರೀ ಎ.ವಿ. ಪ್ರಕಾಶ್ ಅವರ ಪತ್ನಿ. ನಗರದ ಕಮಲಾ ನೆಹರು ಶಿಕ್ಷಣ ಸಂಸ್ಥೆಯಲ್ಲಿ ಸುಮಾರು 29 ವರ್ಷಗಳ ಕಾಲ ಶಿಕ್ಷಕಿಯಾಗಿ ಸೇವೆ ಸಲ್ಲಿಸಿ 2010ರಲ್ಲಿ ನಿವೃತ್ತಿಯಾಗಿದ್ದಾರೆ. ಸ್ವಂತ ಇಚ್ಛೆಯಿಂದ ಆರಿಸಿಕೊಂಡ ವೃತ್ತಿಯಲ್ಲಿ ಸಹಜವಾಗಿಯೇ ಒಳ್ಳೆಯ ಶಿಕ್ಷಕಿ ಎಂದು ಹೆಸರು ಗಳಿಸಿದ ಶ್ರೀಮತಿಯವರನ್ನು ಪಿ.ಇ.ಎಸ್. ಶಿಕ್ಷಣ ಸಂಸ್ಥೆಯು 2005ರಲ್ಲಿ ಶಿಕ್ಷಕರ ದಿನಾಚರಣೆಯಂದು 'ಆದರ್ಶ ಶಿಕ್ಷಕಿ' ಎಂದು ಗೌರವಿಸಿದೆ.

**ರಾಜೇಶ್ವರಿ ವೇಣುಗೋಪಾಲ್:** ಶ್ರೀಮತಿ ರಾಜೇಶ್ವರಿ ವೇಣುಗೋಪಾಲ್ ಅವರು ಶ್ರೀ ಸುಬ್ರಹ್ಮಣ್ಯ ಶಾಸ್ತ್ರಿ ಮತ್ತು ಶ್ರೀಮತಿ ಗೌರಮ್ಮ ದಂಪತಿಗಳ ಪುತ್ರಿ. ಭಾರತ ಸರ್ಕಾರದ ಪ್ರತಿಭಾ ವೇತನಕ್ಕೆ ಭಾಜನರಾದ ಶ್ರೀಮತಿಯವರು ಇಂಗ್ಲೀಷ್ ಮತ್ತು ಇತಿಹಾಸದಲ್ಲಿ ಸ್ನಾತಕ ಪದವಿ ಗಳಿಸಿದ್ದಾರೆ. ಹಿಂದಿ 'ವಿಶಾರದ' ಪರೀಕ್ಷೆಯಲ್ಲಿ ಯಶಸ್ಸು ಕಂಡ ಶ್ರೀಮತಿಯವರು ಮೈಸೂರು ಮತ್ತು ಬೆಂಗಳೂರಿನ ಪ್ರತಿಷ್ಟಿತ ವಿದ್ಯಾಸಂಸ್ಥೆಗಳಲ್ಲಿ ಸುಮಾರು 30 ವರ್ಷಗಳ ಕಾಲ ನಿಸ್ಪೃಹ ಸೇವೆ ಸಲ್ಲಿಸಿದ್ದಾರೆ. ತಾವು ಸೇವೆ ಸಲ್ಲಿಸಿದ ಸಂಸ್ಥೆಗಳಿಂದ ಉತ್ತಮ ಶಿಕ್ಷಕಿ ಎಂದು ಗೌರವಿಸಲ್ಪಟ್ಟಿದ್ದಾರೆ.

❖❖❖



**ಶ್ರೀಮತಿ ಉಮಾಮಣಿ:** 1953ರಲ್ಲಿ ಜನಿಸಿದ ಶ್ರೀಮತಿ ಉಮಾಮಣಿ ಅವರು 1985ರಲ್ಲಿ ಶಿಕ್ಷಕ ವೃತ್ತಿಯನ್ನು ಪ್ರಾರಂಭಿಸಿದರು. ಕಿತ್ತಿಗಾನಹಳ್ಳಿಯ ಪ್ರಾಥಮಿಕ ಶಾಲೆ, ಅಶೋಕನಗರದ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಮತ್ತು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮುಖ್ಯ ಶಿಕ್ಷಕಿಯಾಗಿ ಸೇವೆ ಸಲ್ಲಿಸಿ 2013ರಲ್ಲಿ ನಿವೃತ್ತಿಯಾಗಿದ್ದಾರೆ.

**ಶ್ರೀಮತಿ ಮನೋನ್ಮಣಿ:** ಶ್ರೀಮತಿ ಮನೋನ್ಮಣಿ ಅವರು ತಲಕಾಡು ಆಗಮಿಕ ಶ್ರೀ ನಂಜುಂಡ ದೀಕ್ಷಿತರು ಮತ್ತು ಶ್ರೀಮತಿ ಸೀತಾಲಕ್ಷ್ಮಮ್ಮ ದಂಪತಿಗಳ ಏಕೈಕ ಪುತ್ರಿ. ಬಾಲ್ಯದ ವಿದ್ಯಾಭ್ಯಾಸದ ಜೊತೆ ಇವರು ಹಿಂದಿ ಭಾಷೆಯನ್ನೂ ಕಲಿತವರು. ಹಿಂದಿ ಶಿಕ್ಷಕ್ ತರಬೇತಿ ಪಡೆದ ಶ್ರೀಮತಿಯವರು ಮೈಸೂರು ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ

ಪದವಿ ಗಳಿಸಿದ್ದಾರೆ. ಶ್ರೀ ಕೆ.ಎಸ್. ಸುಂದರ್ ಅವರ ಪತ್ನಿಯಾದ ಶ್ರೀಮತಿಯವರು ಈಗ ಬಸವನಗುಡಿಯ 'ದ ಹೋಮ್ ಸ್ಕೂಲ್'ನಲ್ಲಿ ಹಿಂದಿ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

**ಶ್ರೀಮತಿ ಭಾರತಿ ಅನಂತರಾಂ:** ಶ್ರೀಮತಿ ಭಾರತಿ ಅನಂತರಾಂ ಅವರು 1948ರಲ್ಲಿ ಜನಿಸಿದರು. ಟಿ.ಸಿ.ಎಚ್. ತರಬೇತಿಯ ನಂತರ ಶ್ರೀಮತಿಯವರು ನಗರದ ಮಲ್ಲಿಕಾರ್ಜುನ ಹೈಯರ್ ಪ್ರೈಮರಿ ಶಾಲೆಯಲ್ಲಿ ಸುಮಾರು 35 ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಶ್ರೀಮತಿಯವರಿಗೆ ಒಬ್ಬ ಪುತ್ರಿ ಹಾಗೂ ಒಬ್ಬ ಪುತ್ರರಿದ್ದಾರೆ.

**ಶ್ರೀಮತಿ ಕೆ. ಗೀತಾ:** ಶ್ರೀಮತಿ ಕೆ. ಗೀತಾ ಅವರು 1950ರಲ್ಲಿ ಜನಿಸಿದರು. ಟಿ.ಸಿ.ಎಚ್. ತರಬೇತಿಯ ನಂತರ ಶ್ರೀಮತಿಯವರು ನಗರದ ಮಾರುತಿ ವಿದ್ಯಾ ಹೈಯರ್ ಪ್ರೈಮರಿ ಶಾಲೆಯಲ್ಲಿ ಸುಮಾರು 33 ವರ್ಷ ಮತ್ತು ಸಹಕಾರಿ ವಿದ್ಯಾಕೇಂದ್ರದ ಹೈಯರ್ ಪ್ರೈಮರಿ ಶಾಲೆಯಲ್ಲಿ 7 ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ.

**ಶ್ರೀಮತಿ ಎಸ್. ಸರಸ್ವತಿ:** 1948ರಲ್ಲಿ ಜನಿಸಿದ ಶ್ರೀಮತಿ ಎಸ್. ಸರಸ್ವತಿ ಅವರು ಶ್ರೀ ವೆಂಕಟಾಚಲಪತಿ ಮತ್ತು ಶ್ರೀಮತಿ ಸರೋಜಮ್ಮ ಅವರ ಪುತ್ರಿ ಮತ್ತು ಶ್ರೀ ಭದ್ರಾಚಲ ಅವರ ಪತ್ನಿ. ಶಿಕ್ಷಕ ತರಬೇತಿಯ ನಂತರ ಶ್ರೀಮತಿಯವರು ನಗರದ ಅಶೋಕ ಶಿಶುವಿಹಾರ, ಬಾಪೂಜಿ ವಿದ್ಯಾನಿಕೇತನ್ ಮತ್ತು ಸಾಧನ ವಿದ್ಯಾಲಯಗಳಲ್ಲಿ ಸುಮಾರು 31 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ.

**ಟಿ. ಪದ್ಮಾವತಿ:** ಶ್ರೀಮತಿ ಪದ್ಮಾವತಿ ಅವರು 1969ರಲ್ಲಿ ಹಾಸನದ ಸರ್ಕಾರಿ ಕಾಲೇಜಿನಿಂದ ವಿಜ್ಞಾನದಲ್ಲಿ ಪದವಿ ಪಡೆದರು. 1972ರಲ್ಲಿ ಮೈಸೂರಿನ ಶಾರದಾ ವಿಲಾಸ್ ಟ್ರೈನಿಂಗ್ ಕಾಲೇಜಿನಲ್ಲಿ ಬಿ. ಇಡಿ. ಪದವಿ ಗಳಿಸಿದ ನಂತರ ಕರ್ನಾಟಕ ಸರ್ಕಾರದ ವಿದ್ಯಾ ಇಲಾಖೆಯಲ್ಲಿ 31 ವರ್ಷಗಳ ಕಾಲ ಸೇವೆಸಲ್ಲಿಸಿದರು. ವಿವಿಧ ವಿದ್ಯಾಸಂಸ್ಥೆಗಳಲ್ಲಿ ಕೆಮಿಸ್ಟ್ರಿ–ಬಯಾಲಜಿ ಮತ್ತು ಹಿಂದಿ ವಿಷಯಗಳನ್ನು ಕಲಿಸುವ, ಅಧ್ಯಾಪಕಿಯಾಗಿ, ಮುಖ್ಯೋಪಾಧ್ಯಾಯಿನಿಯಾಗಿ ಸೇವೆ ಸಲ್ಲಿಸಿದ್ದಾರೆ. ಶ್ರೀಮತಿ ಪದ್ಮಾವತಿಯವರು ಶ್ರೀ ಎ.ಎಂ. ಸುಬ್ರಹ್ಮಣ್ಯಂರವರ ಪತ್ನಿ. ಇಬ್ಬರು ಪುತ್ರರೊಂದಿಗೆ ನಿವೃತ್ತ ಜೀವನ ನಡೆಸುತ್ತಿದ್ದಾರೆ.

❖❖❖



ಶಿಕ್ಷಣ ಕ್ಷೇತ್ರದಲ್ಲಿ ಇವರೆಲ್ಲರ ನಿಸ್ಪೃಹ, ಶ್ರದ್ಧಾಪೂರ್ವಕ ಸೇವೆಯನ್ನು ಗುರುತಿಸಿ ಅನೇಕ ಸಂಘಸಂಸ್ಥೆಗಳು ಗೌರವಿಸಿವೆ. ಭಗವಂತನು ಈ ಸನ್ಮಾನ್ಯರೆಲ್ಲರಿಗೂ ಹಲವಾರು ವರ್ಷಗಳ ಆರೋಗ್ಯಪೂರ್ಣ ಜೀವನ ಮತ್ತು ಮನಃಶಾಂತಿಯನ್ನು ಕರುಣಿಸಲೆಂದು ಸಂಘವು ಹಾರೈಸುತ್ತದೆ.



✍ **ಬೆಂಗಳೂರು ಸುಬ್ರಹ್ಮಣ್ಯಂ**

## LETTERS TO THE EDITOR



Testimonials to the President and the Organizing Committee Members of Bruhacharana Community who did a wonderful job on 11.9.2016 Sunday, in conducting the Guruvandana programme at Mallikarjuna Temple premises, Bengaluru. The function was nice & thoughtful, Retired teachers are not forgotten. We were treated, honored and loved by all of you. Brought joyful tears in my eyes. You made us know that out of sight does not mean out of mind and we are still remembered by you all. To honor nearly 40- 50 is a great job. You made us feel that teachers in the society have a great job of moulding the students. They lay the foundation to produce strong sincere, honest, patriotic and above all humble torch bearers who will lead the people to progress in the correct directions.

Florence Nightingale in France who is referred as the Lady with the lamp was a nurse who treated her patients as her own children, serving people at anytime not caring for her own health. Even though we have not seen her, her dedication towards her duty inspires everyone who wants to leave behind a good mark in their respective fields.

So being a teacher is a wonderful thing. It gives you a chance to be with youngsters always. Your interaction with students is like a reversible reaction. You give them and you will get back.


Being a sincere teacher, whenever anybody admires you whether you will get the greatest property in life that is self satisfaction which is more than crores of rupees.

So let us produce students who take our great Bharathiya culture forward and make our mother India great. Let our students be like shining gems radiating all around May God bless every one.

✍ **B S Nagarathna** M. Sc
Retired Prof. of Zoology
Ph : 26619630

ಸಾಧಕರು

# ನಮ್ಮ ಮೇಷ್ಟ್ರು ಎಸ್. ಸಂಪಂಗಿರಾಮಯ್ಯ



ಅಪರೂಪದ ಮೇಷ್ಟ್ರು ತಟ್ಟಹಳ್ಳಿ ಎಸ್. ಸಂಪಂಗಿರಾಮಯ್ಯ ಇವರು 28–08–1924ರಲ್ಲಿ ಜನಿಸಿದರು. ಇವರ ತಂದೆ ಸುಬ್ಬಯ್ಯ ಶಿಕ್ಷಕರಾಗಿದ್ದರು. ತಾಯಿ ಅಖಿಲಾಂಡೇಶ್ವರಿ ಕುಪ್ಪಮ್ಮ. ಬಾಲ್ಯದಲ್ಲಿ ಹೊಸೂರಿನ ಹಳ್ಳಿಯೊಂದರಲ್ಲಿದ್ದು, ಶಾಲೆಗಳೇ ಇಲ್ಲದ ಆ ದಿನಗಳಲ್ಲಿ ಕನ್ನಡ, ಆಂಗ್ಲ ಭಾಷೆ, ಅಲ್ಲಿನ ರೂಢಿ ಭಾಷೆ ತೆಲುಗು ಕಲಿಕೆ. ಮುಂದಿನ ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿನ ಕೋಟೆಯ 'ಬಿ' ಬೀದಿಯಲ್ಲಿ ಪುಟ್ಟ ಮನೆಯೊಂದರಲ್ಲಿ ತಾಯಿ ತಂಗಿ ಮತ್ತು ತಮ್ಮನೊಂದಿಗೆ ವಾಸ.

ಕಾರಣಾಂತರಗಳಿಂದ ಉಂಟಾದ ತಂದೆಯವರ ಅನುಪಸ್ಥಿತಿಯಲ್ಲಿ ತಾಯಿ ಸಂಸಾರದ ನಿರ್ವಹಣೆ ಜವಾಬ್ದಾರಿ ಜೊತೆಗೆ ಮಕ್ಕಳ, ವಿದ್ಯಾರ್ಥಿಯಾಗಿದ್ದ ತಮ್ಮಂತಹವರ ಪಾಲನೆಯ ಜವಾಬ್ದಾರಿ. ಅಲ್ಲಿ ಸಮೀಪದಲ್ಲಿದ್ದ ಜನೋಪಕಾರಿ ದೊಡ್ಡಣ್ಣ ಶೆಟ್ಟರ ಎಸ್.ಎಲ್.ಎನ್. ಶಾಲೆಯಲ್ಲಿ ವ್ಯಾಸಂಗ, ಶಾಲೆಯ ಎಲ್ಲ ಪಠ್ಯ ವಿಷಯಗಳಲ್ಲಿಯೂ ಪ್ರಥಮ ದರ್ಜೆ ಎಂಬ ಹೆಗ್ಗಳಿಕೆ, ಶಿಕ್ಷಕರಿಂದ ಪ್ರಶಂಸೆ. ನಾನು ಆ ಶಾಲೆಯ ವಿದ್ಯಾರ್ಥಿಯಾಗಿದ್ದಾಗ ಅವರನ್ನು ಕುರಿತ ಪ್ರಶಂಸೆ ಕೇಳುತ್ತಿದ್ದುದುಂಟು. ಶಾಲಾ ದಿನಗಳಲ್ಲಿ ವಿದ್ಯಾಭ್ಯಾಸಕ್ಕೆ ತೊಂದರೆಯಾದಾಗ ಕೆಲಕಾಲ ಶ್ರೀನಿವಾಸ ಮಂದಿರ, ತಮ್ಮವರೇ ಆದ ಬಂಧುಗಳೊಬ್ಬರ ಮನೆಯಲ್ಲಿ ಇದ್ದು ಅವರೇ ಉಪನಯನ ಸಹ ಮಾಡಿದರೆಂದು ಕೇಳಿದ್ದೇನೆ. ಕೋಟೆ 'ಬಿ' ಬೀದಿಯಲ್ಲಿಯೇ ಬರಹಗಾರರು 'ಸವಿನುಡಿ' ಪತ್ರಕರ್ತರಾಗಿದ್ದ ಶ್ರೀನಿವಾಸ ಸಹ ವಾಸವಿದ್ದು ಅವರು ಗೆಳೆಯರಾಗಿದ್ದರು.

ನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾಭ್ಯಾಸ. ಗಣಿತ ವಿಭಾಗದ ಬಿ.ಎಸ್.ಸಿ., ಆನರ್ಸ್, ಎಂ.ಎಸ್.ಸಿ. ಉತ್ತಮ ಶ್ರೇಣಿ ಪದವಿ ಪಡೆದು ಅಲ್ಲಿಯೇ ಕೆಲದಿನ ಅಧ್ಯಾಪಕ ವೃತ್ತಿನಡೆಸಿ ನಂತರ ಮಂಡ್ಯ, ಧಾರವಾಡಗಳಲ್ಲಿಯೂ ಕಾಲೇಜುಗಳಲ್ಲಿ ಕೆಲಸಮಾಡಿ ಅನುಭವ ಪಡೆದರು. ಜೊತೆಗೆ ಸಿ.ಎನ್.ಎಸ್. ಎಂದೇ ಪ್ರಸಿದ್ಧರಾದ ಸಿ.ಎನ್. ಶ್ರೀನಿವಾಸ್ ಅಯ್ಯಂಗಾರ್, ಬಿ.ಎಸ್. ಮಾಧವರಾವ್ ಅವರಿಂದ ಮಾರ್ಗದರ್ಶನ ಸಿಕ್ಕಿದ್ದು ಅವರ ಅದೃಷ್ಟ ಎನ್ನಬೇಕು. ಗುರುಗಳ ವಾರ್ಧಕ್ಯದ ದಿನಗಳಲ್ಲಿಯೂ ಮಲ್ಲೇಶ್ವರದ ಅವರ ನಿವಾಸದಲ್ಲಿ ಭೇಟಿಯಾಗಿ ಗೌರವ ಸಲ್ಲಿಸುತ್ತಿದ್ದುದು ನನಗೆ ನೆನಪಿದೆ.

ಆರ್ಥಿಕ ಅನುಕೂಲಗಳೇ ಇಲ್ಲದ ಅವರ ವಿದ್ಯಾಭ್ಯಾಸದ ದಿನಗಳನ್ನು ಎದುರಿಸಿ ಕುಳಿತುಕೊಳ್ಳಲು ಬರೆಯಲು ಅಗತ್ಯವಾದ ಮೇಜು ಕುರ್ಚಿಗಳಿಲ್ಲದ ಆ ದಿನಗಳಲ್ಲಿ ಸದಾ ಅಭ್ಯಾಸ ನಿರತರಾಗಿದ್ದುದು ನನಗೆ ನೆನಪಿದೆ. ದಾವಣಗೆರೆಯ ಸರ್ಕಾರಿ ಕಾಲೇಜಿನಲ್ಲಿ ಅಧ್ಯಾಪನ ನಡೆಸಿ ನಿವೃತ್ತಿಯ ನಂತರ ಬೆಂಗಳೂರಿಗೆ ಬಂದು ಅರಿಸಿನ ಕುಂಟೆಯಲ್ಲಿ ನೆಲೆಸಿ, ವೈಟ್ ಫೀಲ್ಡ್ ಖಾಸಗೀ ಕಾಲೇಜು ಹಾಗೂ ಪ್ರಖ್ಯಾತ ಪಿ.ಇ.ಎಸ್. ಕಾಲೇಜಿನಲ್ಲಿ ಗಣಿತ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದರು. ಪಿಇಎಸ್ ಕಾಲೇಜಿನಲ್ಲಿ ಉಪನ್ಯಾಸ ನಿರತರಾಗಿದ್ದಾಗಲೇ ಹೃದಯಾಘಾತಕ್ಕೊಳಗಾಗಿ ಮೇ. 2ನೇ ತಾರೀಕು 1987ರಂದು ನಮ್ಮನ್ನಗಲಿದರು. ಅವರಿಗಿದ್ದ ಜನಪ್ರಿಯತೆ, ವೃತ್ತಿಪರತೆ, ಎಲ್ಲಕ್ಕಿಂತ ಮಿಗಿಲಾಗಿ ಶಿಸ್ತು ಇವುಗಳು ಅನುಕರಣೀಯ. ಸನ್ಮಾನ್ಯ ಕೃಷ್ಣಯ್ಯರ್, ವಕೀಲ ವಸಂತ್, ಗಾಂಧೀ ವಾದಿ ಎಸ್.ಎನ್. ಸುಬ್ಬರಾವ್, ನಂ. ಕೃಷ್ಣಸ್ವಾಮಿ ಮುಂತಾದವರ ಸ್ನೇಹ ಕಾಲೇಜಿನ ದಿನಗಳಲ್ಲಿ ಖಾದೀದಾರಿಗಳಾಗಿದ್ದರು. ವಿದ್ಯಾರ್ಥಿಗಳಾದ ನಮಗೆ ಬೆಳಗ್ಗೆ 5ಕ್ಕೆ ಅಮರಕೋಶ ಕಂಠಪಾಠ ನಡೆಯುತ್ತಿತ್ತು. ಸುಳ್ಳು, ಸೋಮಾರಿತನ ಕಂಡರೆ ಸಿಟ್ಟಾಗುತ್ತಿದ್ದರು. ಸದಾ ಅಭ್ಯಾಸ ನಿರತ. ಪೂರ್ವ ತಯಾರಿ ಇಲ್ಲದೆ ಕಾಲೇಜಿಗೆ ಹೋಗುತ್ತಿರಲಿಲ್ಲ. ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗ ಅಭ್ಯಾಸಕ್ಕಾಗಿ ಅವರು ಬರೆದಿಟ್ಟಿದ್ದ ನೋಟ್ ಪುಸ್ತಕಗಳು ಇದ್ದಲ್ಲಿ ವಿದ್ಯಾರ್ಥಿಗಳಿಗೆ ತುಂಬಾ ಉಪಯುಕ್ತ ಎಂದು ನನ್ನ ಅನಿಸಿಕೆ. ರಾಜಾಪುರದ ಕೃಷ್ಣಮೂರ್ತಿ (ಹೆಡ್ ಮಾಸ್ಟರ್ ಎಂದೇ ಪ್ರಖ್ಯಾತ) ಅವರ ಸುಪುತ್ರಿ ಶಾಂತಲಕ್ಷ್ಮಿ ಅವರೊಂದಿಗೆ ದಿನಾಂಕ 05–05–1955ರಂದು ವಿವಾಹ, 4 ಮಕ್ಕಳು ಮತ್ತು 7 ಮೊಮ್ಮಕ್ಕಳ ತುಂಬು ಕುಟುಂಬ.

ನೀಟಾದ ಸೂಟ್ ಧರಿಸಿದ ಸದಾ ಹಸನ್ಮುಖಿಯಾಗಿದ್ದ `a smile costs nothing but pays many things' ಎಂಬ ಉಕ್ತಿಗೆ ಮಾದರಿಯಂತಿದ್ದ, ಟಿ.ಎಸ್.ಎಸ್. ಎಂದೇ ಹತ್ತಿರದ ಮಿತ್ರರಿಂದ ಗುರುತಿಸಿಕೊಳ್ಳುತ್ತಿದ್ದ ಇವರು ನಮ್ಮವರು ಎಂಬ ಹೆಮ್ಮೆ ಅಲ್ಲದೆ ನನ್ನಂತಹ ಅನೇಕ ಬಂಧು, ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುತ್ತಾ ನಮ್ಮ ಅಭಿವೃದ್ಧಿ ಕಂಡು ಸಂತಸ ಪಟ್ಟು ಅದನ್ನು ಪತ್ರದ ಮೂಲಕ ಬರೆದು ಸೂಚಿಸಿದ್ದು ಮರೆಯಲಾಗದ ಅನುಭವ. ಶಿಕ್ಷಣದ ಬಗೆಗೆ ಇವರಿಗಿದ್ದ ಅಧ್ಯಯನ ಶೀಲತೆ, ಶಿಸ್ತು ಇವು ಇಂದಿನ ನಮ್ಮ ಯುವ ಪೀಳಿಗೆಗೆ ಮಾರ್ಗದರ್ಶಿಯಾಗುವುದರಲ್ಲಿ ಸಂದೇಹವಿಲ್ಲ.



✍ ಎಸ್.ಎನ್. ಕೃಷ್ಣಮೂರ್ತಿ
ಅರಿಶಿನಕುಂಟೆ

## ನಮ್ಮನ್ನಗಲಿದ ನಮ್ಮವರಿಗೆ–ಸಂಘದ ಶ್ರದ್ಧಾಂಜಲಿ

* **ಸುಬ್ರಹ್ಮಣ್ಯಂ** (90) 1–8–2016, ಸದಸ್ಯೆ, ಜಿ. ಇಂದಿರಾರವರ ಪತಿ
* **ಶಾಂತಮ್ಮ** 3–8–2016, ಸದಸ್ಯ ಮಧುಸೂದನ್‌ರವರ ಸಹೋದರಿ
* **ಆರ್.ವಿ. ಪದ್ಮನಾಭ್** (88) 13–8–2016, ಸದಸ್ಯ – ಆರ್.ಪಿ. ಮೋಹನ್ ಮತ್ತು ಆರ್. ಪಿ. ಶಂಕರ್‌ರವರ ತಂದೆ
* **ಕೆ.ಟಿ. ಚಂದ್ರಶೇಖರ್** 17–8–16, ಕಿತ್ತಿಗಾನಹಳ್ಳಿ ತಿಮ್ಮಪ್ಪಯ್ಯರವರ ಪುತ್ರ (ಸದಸ್ಯ ಕಲ್ಯಾಣರಾಮನ್, ಶೇಷಾದ್ರಿವಾಸು ತಂದೆ)
* **ಸುಬ್ಬರತ್ನಮ್ಮ** ಸಂಘದ ಸದಸ್ಯರು
* **ಶಾಂತಲಕ್ಷ್ಮಿ** 27–8–2016, ದಿ. ಸಂಪಗಿರಾಮಯ್ಯನವರ ಪತ್ನಿ, ಸದಸ್ಯೆ ಹಂಸವಿನೋದಿನಿ ತಾಯಿ
* **ನಾಗರಾಜ್** 2–9–16 (Pottery Town) Vaccinator ಕೃಷ್ಣಮೂರ್ತಿಯವರ ಮಗ
* **ಲಕ್ಷ್ಮಿದೇವಮ್ಮ** (74) 4–9–2016, ಸದಸ್ಯ ಚಂಪಕಧಾಮ ಅವರ ತಾಯಿ
* **ಹೆಚ್.ಪಿ. ರಾಮಕೃಷ್ಣ** (80) 24–9–2016, ಸಂಘದ ಪೋಷಕಿ ಶ್ರೀಮತಿ ಲಲಿತಾ ರಮೇಶ್‌ರವರ ತಂದೆ
* **ರಾಮೇಶ್ವರಯ್ಯ ಸರ್ಜಾಪುರ** (75), ಶಿಕ್ಷಕರು, 26.09.16 (ಸದಸ್ಯ ಆರ್. ವೆಂಕಟೇಶ್‌ಅವರ ತಂದೆ)

# ಗುರುಶಿಷ್ಯ ಸಂಬಂಧ (ಪ್ರಸ್ತುತ)

ವಿದ್ಯಾರ್ಥಿಗಳು ಗುರು, ಹಿರಿಯರು, ತಂದೆ ತಾಯಿಗಳಿಗೆ ಗೌರವ ಕೊಟ್ಟು, ವಿದ್ಯೆಯೊಂದಿಗೆ ಸಂಸ್ಕಾರವನ್ನು ಬೆಳೆಸಿಕೊಳ್ಳಬೇಕು. ಸತ್ಯ, ಪ್ರೀತಿ, ಹಾಗೂ ಗೌರವದಿಂದ ಜೀವಿಸುವುದನ್ನು ಕಲಿಯಬೇಕು. ಇದಕ್ಕೆಲ್ಲಾ ಯೋಗ್ಯ ಗುರುಗಳನ್ನು ಆರಿಸಿಕೊಳ್ಳಬೇಕು. ಇಂದಿನ ಯುವ ಪೀಳಿಗೆ ಹುಡುಗರು ಈಗ ಇದನ್ನೆಲ್ಲಾ ಮರೆತಿದ್ದಾರೆ. ಕೈಯಲ್ಲಿ ಮೊಬೈಲ್ ಇಟ್ಟುಕೊಂಡು ರಾತ್ರಿ, ಹಗಲು, ಮಾಲ್‌ಗಳಲ್ಲಿ ಸಿನಿಮಾ ಮಂದಿರಗಳಲ್ಲಿ ಹೆಣ್ಣು ಗಂಡು ಭೇದವಿಲ್ಲದೆ ತಿರುಗುತ್ತಾರೆ. ಇಂದಿನ ಗುರುಶಿಷ್ಯರ ಸಂಬಂಧಕ್ಕೆ ಅರ್ಥವೇ ಇಲ್ಲ. ಜೊತೆಯಲ್ಲೇ ಕುಳಿತು ಧೂಮಪಾನ, ಮದ್ಯಪಾನ ಎಲ್ಲ ಕಾರ್ಯಕ್ರಮ ನಡೆಯುತ್ತಿರುತ್ತದೆ.

ಹೀಗಿದ್ದಾಗ ವಿದ್ಯಾರ್ಥಿಗಳಿಗೆ ಗುರುಗಳ ಬಗ್ಗೆ ಗೌರವ ಬರುವು ದಾದರೂ ಹೇಗೆ? 'ಗುರು'ಎಂದರೆ ನಮ್ಮನ್ನು ಕತ್ತಲೆಯಿಂದ ಬೆಳಕಿನೆಡೆಗೆ ನಡೆಸುವವನು. ನಮ್ಮ ಅಜ್ಞಾನವನ್ನು ಹೋಗಲಾಡಿಸಿ ಜ್ಞಾನವನ್ನು ನೀಡು ವವನು. ಇಂದಿನ ವಿದ್ಯಾರ್ಥಿಗಳಿಗೆ ಶಿಷ್ಟಾಚಾರ, ಗೌರವ ಕೊಡುವುದು ಶಿಸ್ತು ಸಂಯಮ, ಸಮಯಪ್ರಜ್ಞೆ, ಯಾವುದೂ ಇಲ್ಲ. ಯುವ ಸಮುದಾಯದಲ್ಲಿ ಅತ್ಯಾಚಾರ, ಆತ್ಮಹತ್ಯೆ, ಪ್ರಕರಣಗಳು ಹೆಚ್ಚಾಗುತ್ತಿವೆ.

ವಿದ್ಯಾರ್ಥಿಗಳಿಗೋಸ್ಕರ ಶಾಲಾ ಕಾಲೇಜುಗಳಲ್ಲಿ ಗುರುಗಳು ಪಾಠ ಮಾಡಲು ಕಾಯುವಂತಾಗಿದೆ. ಹಿಂದೆ ವಿದ್ಯಾರ್ಥಿಗಳು ಗುರುಗಳಿಗೆ ಕಾಯುತ್ತಿದ್ದರು. ಐದು ವರ್ಷದ ಮಕ್ಕಳಿಂದಲೇ ಗುರುಕುಲ ವಿದ್ಯಾಭ್ಯಾಸ ನಡೆಯುತ್ತಿತ್ತು. ಈಗ ಎಲ್ಲ ತಲೆಕೆಳಗಾಗಿದೆ.

ಇಂದಿನ ಹುಡುಗರಿಗೆ, ಹುಡುಗಿಯರಿಗೆ, ಬಹು ಮುಖ್ಯವಾದ ತಾಳ್ಮೆಯೇ ಇಲ್ಲ. ಅದು ಎಲ್ಲ ಅನಾಹುತಕ್ಕೆ ಕಾರಣವಾಗುತ್ತಿದೆ.

ಇಂದಿನ ವಿದ್ಯಾರ್ಥಿಗಳಿಗೆ, ವಿದ್ಯಾಭ್ಯಾಸದ ಜೊತೆಯಲ್ಲಿ, ಪ್ರೀತಿ, ಗೌರವ, ಸಹನೆ, ವಿನಯದಿಂದ ಮಾತನಾಡುವುದಕ್ಕೆ ಪ್ರಾಮುಖ್ಯತೆ ಕೊಟ್ಟು, ಇದೆಲ್ಲ ಮೈಗೂಡಿಸಿಕೊಂಡರೆ ಆತ್ಮವಿಶ್ವಾಸ ತಾನಾಗಿಯೇ ಬರುತ್ತದೆ. ಯಾವಾಗ ಆತ್ಮವಿಶ್ವಾಸ ಬರುತ್ತದೋ, ಆಗ ಅತ್ಯಾಚಾರ, ಆತ್ಮಹತ್ಯೆಯಂತಹ ಪ್ರಕರಣಗಳು ಕಡಿಮೆ ಆಗಬಹುದು. ಇವೆಲ್ಲವನ್ನೂ ತಾಳ್ಮೆಯಿಂದ ಕಲಿಯಬೇಕು. ತಂದೆ ತಾಯಿಗಳು ಮಕ್ಕಳಿಗೆ ಆಸ್ತಿ ಮಾಡುವ ಬದಲು, ಅವರನ್ನೇ ದೇಶದ ಸಂಪನ್ಮೂಲವನ್ನಾಗಿ ಮಾಡಬೇಕು ಎಂದು ಒಬ್ಬ ಮಹನೀಯರು ಹೇಳಿದ್ದಾರೆ.

ಯೋಗ್ಯ ಗುರುವಿನಿಂದಲೇ ಒಬ್ಬ ವಿದ್ಯಾರ್ಥಿಯ ಏಳಿಗೆ, ಉದ್ಧಾರ ಸಾಧ್ಯವಾಗಿ ಅವನೂ ಸಹ ಮುಂದೆ ಒಬ್ಬರಿಗೆ ಗುರುವಾಗಬಲ್ಲ. ಗುರು ಶಿಷ್ಯರ ಸಂಬಂಧಕ್ಕೆ ಉದಾಹರಣೆ –

ಭಗವಾನ್ ಕೃಷ್ಣ ಪರಮಾತ್ಮ – ಸಾಂದೀಪಿನಿ
ಏಕಲವ್ಯ, ಅರ್ಜುನ – ದ್ರೋಣ
ರಾಮ ಲಕ್ಷ್ಮಣ – ವಿಶ್ವಾಮಿತ್ರ
ವಿವೇಕಾನಂದ – ರಾಮಕೃಷ್ಣ ಪರಮಹಂಸ

ಎಲ್ಲ ಗುರುಗಳಿಗೂ ನನ್ನ ಅನಂತಾನಂತ ವಂದನೆಗಳು



ಗಾಯತ್ರಿ ಶೇಷಾಚಲ
9449730073

# ಮಕ್ಕಳ ಹಕ್ಕು

ನಮ್ಮ ಭಾರತ ಪ್ರಜಾಪ್ರಭುತ್ವ ರಾಷ್ಟ್ರ. ಭಾರತದಲ್ಲಿ ಅನೇಕ ಗಣ್ಯರಿಂದ ರಚಿಸಲ್ಪಟ್ಟ ಸಂವಿಧಾನವಿದೆ. ಈ ಸಂವಿಧಾನದಲ್ಲಿ ವಯಸ್ಕರಿಗೆ ಇರುವಂತೆಯೇ ಮಕ್ಕಳಿಗೂ ಅನೇಕ ಹಕ್ಕುಗಳ ಉಲ್ಲೇಖವಿದೆ. ಈ ಹಕ್ಕುಗಳು ಮಕ್ಕಳಿಗೆ ತಲುಪಿಸಬೇಕಾದ ಕರ್ತವ್ಯವು ಪೋಷಕರು ಮತ್ತು ಶಿಕ್ಷಕರದ್ದಾಗಿದೆ. ಈ ಕಾನೂನುಬದ್ಧವಾದ ಹಕ್ಕುಗಳನ್ನು ಮಕ್ಕಳು ಚಲಾಯಿಸಬೇಕು. ಈ ಹಕ್ಕುಗಳನ್ನು ಮಕ್ಕಳಿಗೆ ತಲುಪಿಸದಿದ್ದರೆ. ಅದು ಪೋಷಕರು ಮತ್ತು ಶಿಕ್ಷಕರ ತಪ್ಪಾಗುತ್ತದೆ.

**ಮಕ್ಕಳ ಹಕ್ಕು :** ಎಂದರೆ ಮಗುವಿನ ಸರ್ವತೋಮುಖ ಬೆಳವಣಿಗೆಗೆ ಬೇಕಾದ ಅವಶ್ಯಕತೆಗಳು, ಅಗತ್ಯವಾದದು, ಬೇಕೇ ಬೇಕಾದ್ದು, ಲಭಿಸ ಬೇಕಾದ್ದು. ಪಡೆಯಲೇಬೇಕಾದ್ದು ವಯಸ್ಕರು ಅವರಿಗೆ ನೀಡಲೇ ಬೇಕಾದುದು. ಅವರು ಅನುಭವಿಸಬೇಕಾದ್ದು ಈ ಹಕ್ಕುಗಳನ್ನು ಕಾನೂನುಬದ್ಧವಾಗಿ ನೀಡಲೇಬೇಕೆಂಬ ಹಿನ್ನೆಲೆಯಲ್ಲಿ ವಿಶ್ವಸಂಸ್ಥೆ ಚರ್ಚೆ ನಡೆಸಿ. ಇದಕ್ಕೆ ಒಂದು ರೂಪಕೊಟ್ಟು ಅಂಗೀಕರಿಸಿತು. ಇದಕ್ಕೆ ಜಗತ್ತಿನ ಸುಮಾರು 195 ರಾಷ್ಟ್ರಗಳು ಅನುಮೋದಿಸಿವೆ.

ಈ ಒಡಂಬಡಿಕೆಯಲ್ಲಿ ಅನೇಕ ಪರಿಚ್ಛೇದಗಳಿವೆ. ಆದರೆ 4 (ನಾಲ್ಕು) ಹಕ್ಕುಗಳು ಮುಖ್ಯವಾಗಿ ಎದ್ದು ಕಾಣುತ್ತದೆ.

**1.ಬದುಕುವ ಹಕ್ಕು :** ಪ್ರತಿಯೊಂದು ಮಗುವಿಗೂ ಜನ್ಮ ಹೊಂದುವ, ಜೀವಿಸುವ, ಉತ್ತಮ ಆರೋಗ್ಯ ಸೇವೆ ಪಡೆಯುವ, ಪೌಷ್ಟಿಕ ಆಹಾರ ಪಡೆಯುವ, ಒಂದು ಹೆಸರು ಹೊಂದಿರುವ, ತಾನು ಒಂದು ದೇಶದ ಪ್ರಜೆ ಎಂದು ಗುರುತಿಸಿಕೊಳ್ಳುವ ಹಕ್ಕು.

**2. ರಕ್ಷಣೆಯ ಹಕ್ಕು :** ದಬ್ಬಾಳಿಕೆ, ತೊಂದರೆ, ಕಿರುಕುಳ, ಹಿಂಸೆಗಳ ವಿರುದ್ಧ ಮತ್ತು ಶಸ್ತ್ರಾಸ್ತ್ರಗಳಿಂದ ರಕ್ಷಣೆ.

**3. ಅವಕಾಶ ಪಡೆಯುವ ಮತ್ತು ವಿಕಾಸ ಹೊಂದುವ ಹಕ್ಕು :** ಶಿಕ್ಷಣ, ಬೆಳೆಯಲು ಅವಕಾಶ, ಆರೋಗ್ಯ ರಕ್ಷಣೆ, ಸಾಮಾಜಿಕ ಭದ್ರತೆ, ಬಿಡುವು, ಮನೋರಂಜನೆ, ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಅವಕಾಶ.

**4. ಭಾಗವಹಿಸುವ ಹಕ್ಕು :** ಮಕ್ಕಳ ಅಭಿಪ್ರಾಯಗಳಿಗೆ ಮನ್ನಣೆ, ಸ್ವಾತಂತ್ರ್ಯ, ಮಾಹಿತಿ ಲಭ್ಯತೆ, ಚಿಂತನೆಗೆ, ಬೌದ್ಧಿಕ ಚಟುವಟಿಕೆಗಳಿಗೆ ಅವಕಾಶ, ಸಂಘಟಿತರಾಗಿರುವುದು ಮತ್ತು ಧಾರ್ಮಿಕ ಹಕ್ಕುಗಳು. ಮಕ್ಕಳು ತಮ್ಮ ಹಕ್ಕುಗಳಿಗಾಗಿ ತಾವೇ ಹೋರಾಡುವುದು ಸಾಧ್ಯವಿಲ್ಲದ ಸಂದರ್ಭದಲ್ಲಿ ಸಮಾಜದಲ್ಲಿನ ಪ್ರಜ್ಞಾವಂತ ವಯಸ್ಕರು ಹಾಗೂ ಶಿಕ್ಷಕರು ಈ ನಿಟ್ಟಿನಲ್ಲಿ ಶ್ರಮಿಸಬೇಕಿದೆ.

ಛಾಯಾ ಭಗವಾನ್
ನಿವೃತ್ತ ಶಿಕ್ಷಕಿ

ಬ್ರಾಹ್ಮಣ ಸಮುದಾಯದ ವಧು-ವರರಿಗೆ ಒಂದು ವೆಬ್ ಸೈಟ್
ತ್ರಿಮತಸ್ಥ ಬ್ರಾಹ್ಮಣರಿಗೆ ಉಚಿತ ರಿಜಿಸ್ಟ್ರೇಷನ್
Anugrahamatrimony.in
e-mail: contact@anugrahamatrimony.in
ಸಹಾಯವಾಣಿ: 9880337789 (ಶ್ರೀ ರವಿ), 8105626363
ಅಂಚೆ: 619/0, (ಹೊಸ ಸಂಖ್ಯೆ 21), 4ನೇ ಅಡ್ಡರಸ್ತೆ
5ನೇ ಮೈನ್, ಡಾ॥ ಶಿವರಾಮ ಕಾರಂತ ರಸ್ತೆ
ಹನುಮಂತನಗರ, ಬೆಂಗಳೂರು 560019

# ಶಿಕ್ಷಕರ ದಿನಾಚರಣೆ



'ಭಾರತರತ್ನ' ಡಾ. ಸರ್ವಪಲ್ಲಿ ರಾಧ ಕೃಷ್ಣನ್‌ರವರು ಆದರ್ಶ ಶಿಕ್ಷಕ, ವಿಶ್ವವಿಖ್ಯಾತ ತತ್ತ್ವಜ್ಞಾನಿ, ಭಾರತದ ಎರಡನೆಯ ರಾಷ್ಟ್ರಪತಿ 1888ನೇ ಸೆಪ್ಟೆಂಬರ್ 5ರಂದು ಜನಿಸಿದರು. ತತ್ತ್ವಶಾಸ್ತ್ರ, ವೇದಾಂತದ ನೀತಿಸಾರಗಳನ್ನು ಸೇರಿ ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ. ಹಿಂದೂ ಧರ್ಮದ ಬಗೆಗಿನ ತಪ್ಪು ತಿಳುವಳಿಕೆಗಳನ್ನು, ಚಿಂತನೆಗಳನ್ನು ತಿದ್ದಬೇಕೆಂಬ ಹಂಬಲವಿದ್ದ ಇವರಿಗೆ ಸ್ವಾಮಿ ವಿವೇಕಾನಂದರ ಚಿಂತನೆಗಳು ಒತ್ತಾಸೆಯಾದವು. ಮದರಾಸಿನ ಪ್ರೆಸಿಡೆನ್ಸಿ ಕಾಲೇಜ್, ರಾಜಮಹೇಂದ್ರಿಯ ಕಾಲೇಜ್, ಇಂಗ್ಲೆಂಡಿನ ಆಕ್ಸ್‌ಫರ್ಡ್, ಮೈಸೂರು, ಕಲ್ಕತ್ತಾ, ಆಂಧ್ರ, ಬನಾರಸ್ ಹಿಂದೂ, ದಿಲ್ಲಿ ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಿ, ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದರು.

ಯುನೆಸ್ಕೋದ ಅಧ್ಯಕ್ಷ ಸ್ಥಾನ, ಬ್ರಿಟಿಷ್ ಅಕಾಡೆಮಿಯ ಫೆಲೋಷಿಪ್, ಬ್ರಿಟನ್ನಿನ ರಾಣಿಯಿಂದ ದತ್ತವಾದ ಆರ್ಡರ್ ಆಫ್ ಮೆರಿಟ್, ಬ್ರಿಟಿಷ್ ಚಕ್ರಾಧಿಪತ್ಯದ ನೈಟ್ ಹುಡ್, ಟೆಂಪಲ್‌ಟನ್ ಅವಾರ್ಡ್, ವಿವಿಧ ವಿಶ್ವವಿದ್ಯಾಲಯಗಳ ಗೌರವ ಡಾಕ್ಟರೇಟ್, ಇವು ಅವರಿಗೆ ಸಂದ ಕೆಲವು ಪ್ರಮುಖ ಗೌರವಗಳು. ಭಾರತದ ಅತ್ಯುಚ್ಚ ಪುರಸ್ಕಾರವಾದ 'ಭಾರತರತ್ನ' ಪ್ರಶಸ್ತಿಯನ್ನು ಅವರಿಗೆ ನೀಡಲಾಗಿದೆ.

ಬೌದ್ಧಿಕ ಪ್ರಪಂಚದಲ್ಲಿ ತತ್ತ್ವಶಾಸ್ತ್ರವನ್ನು ಅವರಷ್ಟು ಸರಳವಾಗಿ, ನಿಖರವಾಗಿ ಪ್ರತಿಪಾದಿಸಿದವರು ವಿರಳ. ಅವರು 'ಇಂಡಿಯನ್ ಫಿಲಾಸಫಿ' ಎಂಬ ಬೃಹತ್ ಗ್ರಂಥ ರಚಿಸಿದ್ದಾರೆ. ಚರ್ಚೆಯ ವಿಷಯ ಎಷ್ಟೇ ಲಘುವಾಗಿರಲಿ, ಕಠಿಣವಾಗಿರಲಿ, ಅವರು ವಿದ್ಯಾರ್ಥಿಗಳೊಂದಿಗೆ ಬೆರೆತು ಮುಕ್ತವಾಗಿ ಚರ್ಚಿಸಬಲ್ಲವರಾಗಿದ್ದರು. ರಾಷ್ಟ್ರಪತಿಯಾಗಿದ್ದ ಕಾಲದಲ್ಲಿ ಚೀನಾ ಮತ್ತು ಪಾಕಿಸ್ಥಾನಗಳೆರಡರೊಂದಿಗೂ ಯುದ್ಧಗಳಾದವು. ಪ್ರಧಾನಿ ನೆಹರೂ, ನಂತರ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಇಬ್ಬರೂ ನಿಧನರಾದರು. ಆ ಕಷ್ಟದ ದಿನಗಳಲ್ಲಿ ದೇಶದ ಆಡಳಿತ ಸುಸೂತ್ರವಾಗಿ ನಡೆಯಲು ಶ್ರೀ ರಾಧಾಕೃಷ್ಣನ್ ಅವರು ಪ್ರಧಾನಿಗಳಿಗೆ ಸೂಕ್ತ ಮಾರ್ಗದರ್ಶನ ಮಾಡಿದರು. ಒಮ್ಮೆ ಶಿಷ್ಯರೊಬ್ಬರು ಶ್ರೀ ರಾಧಾಕೃಷ್ಣನ್‌ರವರನ್ನು ಹೆಚ್ಚಿನ ಶಿಕ್ಷಣಕ್ಕೆ ವಿದೇಶಕ್ಕೆ ಹೋಗುತ್ತೀರಾ ಎಂದು ಕೇಳಿದ್ದಕ್ಕೆ, ಶ್ರೀಯುತರು 'ಹೋಗುತ್ತೇನೆ, ಆದರೆ ಶಿಕ್ಷಣ ಪಡೆಯಲಲ್ಲ, ಶಿಕ್ಷಣ ನೀಡಲು ಹೋಗುತ್ತೇನೆ' ಎಂದು ಉತ್ತರಿಸಿದರು.


ರಾಷ್ಟ್ರಪತಿಯಾಗಿ ಅವರಿಗೆ ಸಲ್ಲುತ್ತಿದ್ದ ಮಾಸಿಕ ಸಂಬಳವನ್ನು ರೂ. 10,000ಗಳಿಂದ ರೂ. 2000ಕ್ಕೆ ಸ್ವ–ಇಚ್ಛೆಯಿಂದ ಇಳಿಸಿಕೊಂಡದ್ದು ಅವರ ಋಜು ಸ್ವಭಾವಕ್ಕೆ ಸಾಕ್ಷಿ. ಕಲ್ಕತ್ತಾ ವಿಶ್ವವಿದ್ಯಾಲಯಕ್ಕೆ ನೇಮಕ ಗೊಂಡಾಗ, ಅವರನ್ನು ಅವರ ವಿದ್ಯಾರ್ಥಿಗಳೇ ಬೀಳ್ಕೊಂಡ ಸನ್ನಿವೇಶವನ್ನು ಪ್ರೊ. ಎ.ಎನ್. ಮೂರ್ತಿಯವರು ವರ್ಣಿಸಿದ್ದಾರೆ. ಕೋಚ್ ಗಾಡಿಯನ್ನು ಹೂವಿನಿಂದ ಅಲಂಕರಿಸಿ ಶ್ರೀ ರಾಧಾಕೃಷ್ಣನ್ ಕುಳಿತ ಆ ಗಾಡಿಯನ್ನು ವಿದ್ಯಾರ್ಥಿಗಳೇ ಎಳೆದುಕೊಂಡು ಹೋದರಂತೆ. ದೈವ ಮಂದಿರವನ್ನು ಭಕ್ತರು ಅಲಂಕರಿಸುವಂತೆ ರೈಲುಗಾಡಿಯನ್ನು ವಿದ್ಯಾರ್ಥಿಗಳು ಅಲಂಕರಿಸಿದ್ದರಂತೆ. ವಿದ್ಯಾರ್ಥಿಗಳ 'ಜೈಕಾರ ಮೊಳಗುತ್ತಿತ್ತು. ವಿದ್ಯಾರ್ಥಿಗಳನೇಕರು ಭಾವೋದ್ರೇಕದಿಂದ ಕಂಬನಿಗರೆದರು. ಇಂಥ ವಿಶ್ವಾಸವನ್ನು ಗಳಿಸಿದ ಅಧ್ಯಾಪಕರಿಂದ ವಿದ್ಯೆಗಳಿಸುವ ಸದವಕಾಶ ಪಡೆದ ವಿದ್ಯಾರ್ಥಿಗಳೇ ಧನ್ಯರು.

ಹೀಗೆ ಎಲ್ಲ ರೀತಿಯಲ್ಲೂ ಗೌರವಯುತರಾದ ಗುರುವರ್ಯರಾದ ಡಾ. ಎಸ್. ರಾಧಾಕೃಷ್ಣನ್ ಅವರ ಹುಟ್ಟಿದ ದಿನವು 'ಶಿಕ್ಷಕರ ದಿನಾಚರಣೆ' ಯಾಗಿ ಆಚರಣೆಗೊಳ್ಳುತ್ತಿರುವುದು ಸಮರ್ಪಕವೆನಿಸಿದೆ. ಈ ಮಹಾನ್ ಚೇತನಕ್ಕೆ ನಮ್ಮ ನಮನಗಳು.



ಲಲಿತಾ ರಮೇಶ್
9945199637


## ನೆನಪಿನಂಗಳದಲ್ಲಿ ಚಿತ್ರ 26



ಶಿಕ್ಷಕ ರಾಜಾಪುರ್ ಶ್ರೀ ಶ್ರೀನಿವಾಸಮೂರ್ತಿಯವರ 60ನೇ ಹುಟ್ಟುಹಬ್ಬದ ಸಂದರ್ಭ (1966)

ನಮ್ಮವರು

# ಪ್ರಾಧ್ಯಾಪಕ-ವಿಜ್ಞಾನಿ ಡಾ॥ ಜೆ. ಎಸ್. ವೇಣುಗೋಪಾಲ್



ಡಾ॥ ಜೆ. ಐ. ಸುಬ್ರಹ್ಮಣ್ಯಮ್ ಹಾಗೂ ಶ್ರೀಮತಿ ಲಲಿತಾ ಸುಬ್ರಹ್ಮಣ್ಯಮ್‌ರವರ ಪುತ್ರ ಡಾ॥ ಜೆ.ಎಸ್. ವೇಣುಗೋಪಾಲ್ ರವರು 01.06.1935ರಂದು ಜನಿಸಿದರು. ಕರ್ನಾಟಕ ವಿಶ್ವವಿದ್ಯಾಲಯದಿಂದ 1956ರಲ್ಲಿ ಭೂ ವಿಜ್ಞಾನದಲ್ಲಿ ನಾಲ್ಕನೆ ರ‍್ಯಾಂಕ್ ಪಡೆದು ಬಿ.ಎಸ್ಸಿ. (ಆನರ್ಸ್) ಯಲ್ಲಿ ಉತ್ತೀರ್ಣರಾದರು. 1960ರಲ್ಲಿ ಶಿಲೆ ಮತ್ತು ಖನಿಜ ವಿಷಯಗಳಲ್ಲಿ ಸಂಶೋಧನ ಎಂ.ಎಸ್ಸಿ.,ಯಲ್ಲಿ ಅತ್ಯುತ್ತಮ ಅಂಕಗಳನ್ನು ಗಳಿಸಿದರು. 1961ರಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯಿಂದ ಸ್ನಾತಕೋತ್ತರ ಪದವಿಯನ್ನು ಪಡೆದರು. 1955–1962ರಲ್ಲಿ ಜರ್ಮನ್ ಭಾಷಾಂತರ ತಾಂತ್ರಿಕ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಇದಲ್ಲದೆ ದೇಶ ವಿದೇಶಗಳ ವಿದ್ಯಾಲಯಗಳಿಂದಲೂ ವಿದ್ಯಾರ್ಥಿ ವೇತನ ಪಡೆದ ಹೆಗ್ಗಳಿಕೆ ಇವರಿಗೆ ಸೇರುತ್ತದೆ.

1972ರಿಂದ 1985ರವರೆಗೂ ಹಲವಾರು ಸಂಸ್ಥೆಗಳಿಗೆ ಫೆಲೊ, ಲೈಫ್ ಫೆಲೊ, ಮೆಂಬರ್, ಲೈಫ್ ಮೆಂಬರ್, ಫೌಂಡರ್ ಮೆಂಬರ್, ಖಜಾಂಚಿ, ಕಾರ್ಯದರ್ಶಿಯಾಗಿ ಲಂಡನ್, ಅಮೇರಿಕ, ಕಲ್ಕತ್ತ, ಮದರಾಸ್ ವಿದ್ಯಾಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

ವಿದ್ಯಾಕ್ಷೇತ್ರದಲ್ಲೇ ಅಲ್ಲದೆ ಸಾಮಾಜಿಕ ಕ್ಷೇತ್ರಗಳಾದ ಮೈಸೂರಿನ ವಿಜ್ಞಾನ ಮತ್ತು ತಾಂತ್ರಿಕ ವೇದಿಕೆ, ವೃಕ್ಷ ಪ್ರೇಮಿಗಳ ವೇದಿಕೆ, ಚಲನಚಿತ್ರ ಸಂಸ್ಥೆಗಳಿಗೆ ಸಂಸ್ಥಾಪಕ ಸದಸ್ಯರು ಆಗಿದ್ದರು.

ಇವರ ಇನ್ನಿತರ ವಿದ್ಯಾಕ್ಷೇತ್ರಗಳಲ್ಲಿನ ವೃತ್ತಿಯನ್ನು ಹೆಸರಿಸುವುದಾದರೆ:

1. ಮೈಸೂರಿನ ಸಿ.ಎಫ್.ಟಿ.ಆರ್.ಐ.ನಲ್ಲಿ ಉಪನ್ಯಾಸಕ, ಹಿರಿಯ ವಿಜ್ಞಾನಿಯಾಗಿ ವೃತ್ತಿ.
2. ಯು.ಜಿ.ಸಿ., ದೆಹಲಿ, ಕರ್ನಾಟಕ, ಬಾಂಬೆ, ರೂರ್ಕಿ ವಿಶ್ವವಿದ್ಯಾಲಯಗಳಲ್ಲಿ ಸಂದರ್ಶಕ ಪ್ರಾಧ್ಯಾಪಕ ವೃತ್ತಿ.
3. ನ್ಯೂಜರ್ಸಿ, ಮಿನಿಸೋಟ, ಚಿಕಾಗೋ, ಪೆನ್ಸಲ್ವೇನಿಯ, ಕ್ಯಾಲಿಫೋರ್ನಿಯ, ಲಾಸ್ ಏಂಜಲೀಸ್, ರಿವರ್ ಸೈಡ್, ಲಂಡನ್, ರೋಮ್, ಮಿಲನ್, ಇಟಲಿ, ಝೂರಿಚ್, ಸ್ವಿಟ್ಜರ್‌ಲ್ಯಾಂಡ್, ಫ್ರಾಂಕ್‌ಫರ್ಟ್, ಟೋಕಿಯೊಗಳಲ್ಲಿ ಸಂದರ್ಶಕ ವಿಜ್ಞಾನಿ.
4. ಮೈಸೂರು ವಿಶ್ವವಿದ್ಯಾಲಯದ ಆಡಳಿತ ತರಬೇತಿ ಕಾಲೇಜ್, ಕೃಷಿ ಮಾರುಕಟ್ಟೆ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕ.
5. ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಸಂಶೋಧಕ.
6. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಅಧ್ಯಾಪಕ, ಅರ್ಹತಾ ಸಂಶೋಧಕ.

ಶ್ರೀಯುತರ ಸಂಶೋಧನಾ ಪ್ರಕಟಣೆಗಳು 120ಕ್ಕೂ ಅಧಿಕ. ತಾಂತ್ರಿಕ ವಿಷಯಗಳ ಪುಸ್ತಕಗಳಲ್ಲಿ 10 ಅಧ್ಯಾಯಗಳ ಕೂಡುಗೆ, 5 ತಾಂತ್ರಿಕ ಪುಸ್ತಕಗಳಲ್ಲಿ ಸಂಪಾದಕೀಯ ವೃತ್ತಿ. 9 ಪ್ರಬಂಧಗಳು ಮತ್ತು ಕೈಪಿಡಿ, 300 ವಿಚಾರ ಸಂಕೀರ್ಣಗಳು, 250ಕ್ಕೂ ಅಧಿಕ ಉಪನ್ಯಾಸಗಳು.

ಸ್ನಾತಕೋತ್ತರ, ಡಾಕ್ಟರೇಟ್ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ, ಆಹಾರ ತಂತ್ರಜ್ಞಾನ, ಭೂವಿಜ್ಞಾನ, ಪರಿಸರ ವಿಜ್ಞಾನ ಮತ್ತು ಅತ್ಯಾಧುನಿಕ ಉಪಕರಣಗಳ ವಿಶ್ಲೇಷಣೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರಲ್ಲದೆ ಕ್ಷಕಿರಣ, ಖನಿಜ ವಿಜ್ಞಾನ, ಆಹಾರ ಸಂಸ್ಕರಣೆ, ಯೋಜನೆ ಮತ್ತು ಇನ್ನಿತರ ವಿಷಯಗಳಲ್ಲಿ ಶಿಕ್ಷಣ ಅಭಿವೃದ್ಧಿಗಾಗಿ ಶ್ರಮಿಸಿದ್ದಾರೆ.

ಶ್ರೀ ವೇಣುಗೋಪಾಲ್‌ರವರು ವಿಜ್ಞಾನ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆ ಮಾಡಿ ದೇಶದ ಉನ್ನತಿಗೆ ತಮ್ಮ ಪಾಲಿನ ಕೊಡುಗೆ ನೀಡಿದ್ದಾರೆ. ಇಂತಹ ಮಹಾನ್ ಶಿಕ್ಷಕ ಬೃಹಚ್ಚರಣ ಸಮುದಾಯದಲ್ಲಿ ಎಲೆ ಮರೆಯ ಕಾಯಿಯಂತಿದ್ದರು. ಇವರ ಪರಿಚಯ ಮಾಡಿಕೊಡುವ ಸೌಭಾಗ್ಯ ಇಂದು ನಮ್ಮದಾಗಿದೆ. ಇವರ ಪರಿಶ್ರಮ ಶಿಕ್ಷಣ ಕ್ಷೇತ್ರದಲ್ಲಿ ಆಸಕ್ತಿ ಇರುವವರಿಗೆ ಮಾರ್ಗದರ್ಶನ ಆಗುತ್ತದೆಂದು ನಮ್ಮ ನಂಬಿಕೆ. ಶ್ರೀಯುತರ ಸೋದರಿ ಶ್ರೀಮತಿ ಜೆ.ಎಸ್. ಇಂದಿರರವರು ನಮ್ಮ ಸಂಘದ ಸದಸ್ಯೆ ಹಾಗೂ 'ಗುರುವಂದನೆ' ಪುರಸ್ಕೃತೆ.

ಆರ್. ರಮೇಶ್
9886034048

---

'ಬೃಹಚ್ಚರಣ' ಸಂಘದ ಅಧ್ಯಕ್ಷರ ಸಮಕ್ಷಮಕ್ಕೆ

ದಿನಾಂಕ 11–9–2016ರಂದು ಸಂಘದಿಂದ ನಮ್ಮ ಸಮುದಾಯದ ನಿವೃತ್ತ ಶಿಕ್ಷಕರನ್ನು ಗೌರವಿಸಿದ ಅಭಿನಂದನಾ ಕಾರ್ಯಕ್ರಮವು ಅತ್ಯಂತ ಶಿಸ್ತಿನಿಂದ ನಡೆದುದು ಸಂತೋಷದ ವಿಷಯ.

ಮುಖ್ಯ ಅತಿಥಿಗಳಾಗಿ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಅಧ್ಯಕ್ಷರ ಪ್ರಬುದ್ಧವಾದ ಹಿತವಚನವು ಮನಸ್ಸಿಗೆ ನಾಟುವಂತೆ ಇತ್ತು. ಇದೇ ಸಂದರ್ಭದಲ್ಲಿ ನನ್ನ ಪತ್ನಿ ಶ್ರೀಮತಿ ರಾಜೇಶ್ವರಿಗೆ ಸಂಘವು ಗೌರವಿಸಿರುವುದಕ್ಕೆ ನನ್ನ ಕುಟುಂಬವು ಆಭಾರಿಯಾಗಿದೆ.

ನಿಮ್ಮೆಲ್ಲ ಕಾರ್ಯಕ್ರಮಗಳಿಗೂ ನಮ್ಮ ಕುಟುಂಬ ಸದಸ್ಯರ ಪೂರ್ಣ ಸಹಕಾರ ಇದೆ ಎಂದು ಹೇಳಬಯಸುತ್ತೇನೆ.

ಕೆ.ಎಲ್. ವೇಣುಗೋಪಾಲ್
ಸಂಘದ ಸದಸ್ಯ

---

## ಸಂಘಕ್ಕೆ ದೇಣಿಗೆ ನೀಡಿದವರಿಗೆ ಅಭಿನಂದನೆ

### ಅನ್ನದಾನ

| | |
|---|---|
| 1. ಟಿ. ವಿ. ಎಸ್. ಶರ್ಮ | 18,000 |
| 2. ಬಿ. ವಿ. ಪದ್ಮ | 10,000 |
| 3. ರವಿಕುಮಾರ್ | 2,000 |

### ವಿದ್ಯಾನಿಧಿ

| | |
|---|---|
| 1. ಸಿ. ಎಸ್. ಶ್ರೀನಿವಾಸ ಮೂರ್ತಿ | 10,000 |
| 2. ಶ್ರೀಕಂಠೇಶ್ವರ್ ಅಯ್ಯರ್ ಕುಟುಂಬ | 10,000 |
| 3. ಬಿ. ವಿ. ಪದ್ಮ | 10,000 |
| 4. ಬಿ. ಇ. ಸಂಧ್ಯಾ | 10,000 |
| 5. ಡಾ॥ ಜಿ. ಸ್ವಾಮಿನಾಥ್ | 10,000 |

## ಮಕ್ಕಳ ಶಿಕ್ಷಣ ಭವಿಷ್ಯ?

ಜೀವಿಯ ಉದ್ಧಾರಕ್ಕೆ ಮತ್ತು ಪ್ರಪಂಚಕ್ಕೆ ವಿದ್ಯಾಭ್ಯಾಸ ಅತಿ ಮುಖ್ಯ. ವಿದ್ಯೆ ಮತ್ತು ಲಲಿತಕಲೆ ಎರಡು ವಿಧವಿದೆ. ಬುದ್ಧಿವಂತರ ಸ್ವತ್ತು ವಿದ್ಯಾಭ್ಯಾಸವಾದರೆ ಹೃದಯವಂತರಿಗೆ ಕಲೆಯಲ್ಲಿ ಆಸಕ್ತಿ. ಯಾವುದೇ ಕಲಿಕೆಗೆ ಆಸೆ, ಶ್ರದ್ಧೆ ಅತಿ ಮುಖ್ಯ. ಇಲ್ಲದಿದ್ದರೆ ಹಿರಿಯರ, ಉಪಾಧ್ಯಾಯರ, ತಂದೆ-ತಾಯಿಗಳ ಬೋಧನೆ, ಹಿತವಾಕ್ಯ, ಮಾರ್ಗದರ್ಶನದ ಅಡಿಪಾಯ ವಿದ್ಯೆಗೆ ಅಗತ್ಯ. ನಂತರ ಅವರ ಆಯ್ಕೆ. ಆದರೆ ಈಗಿನ ಕಾಲದಲ್ಲಿ ವಿಜ್ಞಾನ ಮುಂದುವರೆದು ಮಕ್ಕಳೂ ಸಹಾ ಯಾಂತ್ರಿಕ ಮನುಷ್ಯರಂತೆ (Robot) ಬಾಲ್ಯದಲ್ಲೇ Mobile, TV, Tab, Computer ಇದರ ಚಾಲನೆ ಹೇಗೆ? ಏನು? ಎಂದು ದೊಡ್ಡವರಿಗಿಂತ ಹೆಚ್ಚು ಕಲಿತು ಹಿರಿಯರಿಗೆ ಮಾರ್ಗದರ್ಶನ ತೋರುವ ಮಟ್ಟಕ್ಕೆ ಬಂದಿದ್ದಾರೆ. ಈ ರೀತಿಯ ಜಾಣ್ಮೆ ಬಾಲ್ಯದಲ್ಲೇ ಇರುವುದು ಸಂತಸದ ವಿಷಯ. ಆದರೆ ಇಲ್ಲಿ ಈಗಿನ ಪೀಳಿಗೆಯವರು ಸಾಧನೆಯಿಂದ ವಿಮುಖರಾಗುತ್ತಿದ್ದಾರೆ. ಸಾಮಾನ್ಯರ ಜೊತೆ ಬೆರೆಯದೆ ಬಾಲ್ಯದ ಆಟೋಟಗಳಿಂದ ವಂಚಿತರಾಗುತ್ತಿದ್ದಾರೆ ಎಂದು ಯಾರ ಬಳಿ ಹೇಳುವುದು? ತಂದೆ ತಾಯಿಯರಿಗೂ ಪುರುಸೊತ್ತಿಲ್ಲ. ಬೆಳಿಗ್ಗೆ ಆದರೆ ಧಾವಂತ ಜೀವನ. ಈ ಜೀವನ ನಡೆಸಲು ಹಣವು ಅಗತ್ಯ. ಹೀಗಾಗಿ ಯಾರೂ ಯಾರನ್ನೂ ವಿಚಾರಿಸಲು ಸಮಯವಿಲ್ಲ. ಸಾಯಂಕಾಲ ಮನೆಗೆ ಬಂದ ಮೇಲೆ ಆಯಾಸ, ನಾಳೆಯ ತಯಾರಿ ಆಗಲೇಬೇಕು. ಇನ್ನು ಪಾಪ ಹಿರಿಯರು ಎಲ್ಲಿ ಹೋಗಬೇಕು? ತಮ್ಮ ಮನದ ಅಳಲನ್ನು ಹಂಚಿಕೊಳ್ಳುವುದು ಯಾರ ಬಳಿ? ಇದು ಭೂತಾಕಾರವಾಗಿರುವ ಪ್ರಶ್ನೆ. ಉತ್ತರ ಯಾರ ಬಳಿಯೂ ಇಲ್ಲ. ಈಗ ಆಧುನಿಕತೆಗೆ ತಕ್ಕಂತೆ ಮಿತ ಸಂತಾನ. ಹಾಗಾಗಿ ಮಕ್ಕಳಿಗೆ ಮನೆಯಲ್ಲಿ ಜೊತೆಗೆ ನಾಯಿ, ಬೆಕ್ಕು ಸಾಕಿ ಅವುಗಳೊಂದಿಗೆ ಒಡನಾಟ. ಪ್ರಾಣಿಗಳ ಸಾಕುವಿಕೆಯಿಂದ ಬಾಲ್ಯದಲ್ಲಿ ತರಬೇತಿ ಪಡೆಯಬಹುದೆಂದು ಕೆಲವು ಪತ್ರಿಕೆಗಳಲ್ಲಿ ಓದಿದ್ದೇನೆ. ಮಾತು ಬರುವ ಮನುಷ್ಯರ ಬದಲು ಮೂಕ ಪ್ರಾಣಿಗಳು ಏನು ತರಬೇತಿ ಕೊಟ್ಟಾವು? ಅಂತೂ ಇಂತೂ ಕುಂತಿ ಮಕ್ಕಳಿಗೆ ವನವಾಸ ಎಂಬಂತೆ.

ಒಂದು ಮಗುವಿನ ಬುದ್ಧಿಯ ಸಾಮರ್ಥ್ಯ ಎಷ್ಟು? ಏನೇನು ಸಮರ್ಪಕವಾಗಿ ಕಲಿಯುವುದು? ಎನ್ನುವುದು ದೊಡ್ಡ ಸಮಸ್ಯೆ. ಶಾಲೆಯಲ್ಲಿ, ಮನೆಪಾಠದಲ್ಲಿ. ಮನೆಯಲ್ಲಿ ಹೋಂವರ್ಕ್ ಈ ರೀತಿ ಒಂದು ನಿಮಿಷವೂ ಬಿಡುವಿಲ್ಲದೆ ತಲೆ ತುಂಬ ಗೋಜಲಾಗಿ ಬಿಡುತ್ತದೆ.

ಇಷ್ಟೇ ಅಲ್ಲದೆ ತಮ್ಮ ಮಕ್ಕಳಿಗೆ ಸಂಗೀತ, ನೃತ್ಯ, ಈಜುವುದು, ಚಿತ್ರಕಲೆ, Skating, ವ್ಯಕ್ತಿತ್ವ ವಿಕಸನ, ನಾಟಕ, Abacus, ಭಜನೆ, ದೇಶ ಭಕ್ತಿಗೀತೆ ಇನ್ನು ಮುಂತಾದವು. ಇವನ್ನೆಲ್ಲ ಕಲಿಯಬೇಕೆಂಬುದು ಹಿರಿಯರ ಹಂಬಲ. ಅಲ್ಲದೆ ಶಾಲೆಯಲ್ಲಿ 100% ಅಂಕಗಳನ್ನು ಗಳಿಸಬೇಕೆಂಬ ತೀವ್ರ ಇಚ್ಛೆ. ತಮ್ಮ ಮಕ್ಕಳು ಎಲ್ಲಾ ಕ್ಷೇತ್ರದಲ್ಲೂ ಮುಂದೆ ಬರಬೇಕೆಂಬ ಆಕಾಂಕ್ಷೆ. ಸಣ್ಣ ಬುರುಡೆಯಲ್ಲಿ ಎಷ್ಟು ತುಂಬುವುದು? ಮಗು ಕ್ರಮೇಣ ಖಿನ್ನತೆಗೆ ಒಳಗಾಗುತ್ತದೆ, ಮಂಕಾಗುತ್ತದೆ. ಈ ರೀತಿ ಮಕ್ಕಳಿಗೆ ತಾವು ಇರದಿದ್ದರೆ ತಮಗೆ ಎಲ್ಲೂ ಸ್ಥಾನವಿರುವುದಿಲ್ಲ ಎಂಬ ಗೊಂದಲ. ಇದಕ್ಕೆ ಪರಿಹಾರ? ತಂದೆ ತಾಯಿಗಳು ತಮ್ಮ ಮಗುವಿನ ಮೆದುಳಿನ ಸಾಮರ್ಥ್ಯ, ಶಕ್ತಿ ಎಷ್ಟು ಎಂದು ತಿಳಿದು ಉತ್ಸಾಹ ಕುಗ್ಗದಂತೆ ಕಲಿಸಬೇಕು. ಹಾಗೆಯೇ ಶಿಕ್ಷಕ ವರ್ಗವೂ ಸಹಕರಿಸಬೇಕು. ಬೆದರಿಕೆ ಇಡಬಾರದು. ಎರಡೂ ಕಡೆ ಸ್ವಲ್ಪ ದಯೆ, ಪ್ರೀತಿ ಇದ್ದರೆ ಮುಂದೆ ಮಕ್ಕಳ ಭವಿಷ್ಯ ಸುಧಾರಿಸಬಹುದೇನೋ!



✍ ಭ್ರಮರ ಗೋಪಿನಾಥ್

## ಜ್ಞಾನ ಮತ್ತು ಸಂವೇದನೆ

ಶಿಕ್ಷಕರು ಏಕೆ ವಿಶೇಷವಾಗುತ್ತಾರೆ? ಶಿಕ್ಷಕರು ವಿಶೇಷ ಏಕೆಂದರೆ ಅವರು ಆಂಗ್ಲಭಾಷೆ, ಚರಿತ್ರೆ, ಗಣಿತ ಮತ್ತು ವಿಜ್ಞಾನ ತಿಳಿಸಿಕೊಡುವುದಲ್ಲದೆ ಪ್ರತಿಯೊಬ್ಬ ವಿದ್ಯಾರ್ಥಿಯು ದೇಶದ ಸತ್ಪ್ರಜೆಯಾಗುವುದಲ್ಲದೇ ಮನುಷ್ಯತ್ವವನ್ನು ಹೊಂದಿ ಎಲ್ಲರೊಂದಿಗೆ ಸಹಬಾಳ್ವೆ ನಡೆಸುವಂತಾಗಬೇಕು ಎಂಬುದೇ ಶಿಕ್ಷಕರ ಕಾಳಜಿಯಾಗಿರುತ್ತದೆ. ವಿದ್ಯಾರ್ಥಿಯು ಪರಿಶ್ರಮಪೂರ್ವಕವಾಗಿ ಮತ್ತು ಪ್ರಜ್ಞಾ ಪೂರ್ವಕವಾಗಿ ಪ್ರಯತ್ನಿಸಿದರೆ ಸಮಾಜದಲ್ಲಿ ಸುಖಜೀವನ ನಡೆಸಲು ಅನುವಾಗುತ್ತದೆ. ಮನುಷ್ಯರ ಸ್ವಭಾವ ಅರ್ಥವಾಗುವುದು ಅವರು ಬೇರೆಯವರೊಂದಿಗೆ ಮಾತನಾಡುವ ಮತ್ತು ನಡೆದುಕೊಳ್ಳುವ ರೀತಿಯಿಂದ. ಸರಿಯಾದ ಮಾರ್ಗದರ್ಶನದಿಂದ ಮನುಷ್ಯನು ತಪ್ಪನ್ನು ತಿದ್ದುಕೊಳ್ಳಬಹುದು. ನಮಗೆ ನ್ಯಾಷನಲ್ ಹೈಸ್ಕೂಲಿನಲ್ಲಿ ಆಂಗ್ಲಭಾಷೆ ಪಾಠ ಮಾಡುತ್ತಿದ್ದ ಶ್ರೀ ಜಿ.ಕೆ. ನಾಗರಾಜ್‌ರವರು ಪಾಠವನ್ನಷ್ಟೇ ಅಲ್ಲದೆ ಜೀವನಕಲೆ, ಸಹಜೀವನ, ಜೀವನೋತ್ಸಾಹ, ಇತರರನ್ನು ಪ್ರೋತ್ಸಾಹಿಸುವುದು. ಗೌರವಿಸುವುದನ್ನೂ ಕಲಿಸಿದರು. ಬೇರೆಯವರೊಂದಿಗೆ ವ್ಯವಹರಿಸಬೇಕಾದರೆ ಇಂಗಿತ ಜ್ಞಾನವು ಮುಖ್ಯ ಎಂದೂ ತಿಳಿಸುತ್ತಿದ್ದರು. ನ್ಯಾಷನಲ್ ಹೈಸ್ಕೂಲಿಗೆ ನನ್ನನ್ನು ಸೇರಿಸಿದ್ದಕ್ಕೆ ನನ್ನ ತಂದೆಗೆ ಕೃತಜ್ಞತೆ ಹೇಳಬಯಸುತ್ತೇನೆ. ಜಿ.ಕೆ. ಎನ್‌ರವರು ಶ್ವೇತವರ್ಣದ ಉಡುಪು ಧರಿಸಿ ಮತ್ತು ಹಣೆಗೆ ಕುಂಕುಮ ಇಡುತ್ತಿದ್ದರು. ಶ್ವೇತವರ್ಣವು ದೇವಿ ಸರಸ್ವತಿ ಮತ್ತು ವಿದ್ಯಾಭಿಮಾನಿ ಶಾರದೆಯ ಸಂಕೇತ. ಮತ್ತು ಸರಿಯಾದ ತಿಳುವಳಿಕೆ, ಸ್ವಚ್ಛತೆ, ಶಾಂತಿ, ನೆಮ್ಮದಿಯನ್ನೂ ಪ್ರತಿನಿಧಿಸುತ್ತದೆ. ಶ್ರೀಯುತರು ವಿದ್ಯಾರ್ಥಿಗಳಿಗೆ ಪ್ರೇರಕ ಶಕ್ತಿಯಾಗಿದ್ದರು. ತರಗತಿಯಲ್ಲಿ ಎಷ್ಟೇ ಸುಲಭ ಪ್ರಶ್ನೆಗೆ ಉತ್ತರಿಸಲು ಪ್ರಯತ್ನಿಸಿದರೂ ವಿದ್ಯಾರ್ಥಿಗಳಿಗೆ ಶ್ಲಾಘನೆ ಮಾಡಿ, 'ನೀನು ಪ್ರಯಾಸಪಟ್ಟರೂ ಪ್ರವರ್ಧಮಾನಕ್ಕೆ ಬರುತ್ತೀಯೆ' ಎಂದು ಹುರಿದುಂಬಿಸುತ್ತಿದ್ದರು.

ಸಾಧಾರಣ ಶಿಕ್ಷಕರು ಬರೀ ಪಾಠ ಮಾಡುತ್ತಾರೆ. ಒಳ್ಳೆಯ ಶಿಕ್ಷಕರು ವಿವರಿಸುತ್ತಾರೆ. ಉತ್ತಮ ಶಿಕ್ಷಕರು ಮತ್ತು ಅತ್ಯುತ್ತಮ ಶಿಕ್ಷಕರು ಸ್ಫೂರ್ತಿ ತುಂಬುತ್ತಾರೆ ಎಂದು ಆಂಗ್ಲ ಭಾಷೆಯಲ್ಲಿರುವಂತೆ ನಮ್ಮ ಶಿಕ್ಷಕರಾದ ಶ್ರೀ ಜಿ.ಕೆ.ಎನ್‌ರವರು ಸ್ಫೂರ್ತಿಯ ಚಿಲುಮೆಯೇ ಆಗಿದ್ದರು. ಜಿ.ಕೆ.ಎನ್‌ರವರು ಅವರದೇ ಆದ ಶೈಲಿಯಲ್ಲಿ ಕಥೆಗಳನ್ನು ಮತ್ತು ಘಟನೆಗಳನ್ನು ವಿವರಿಸಿ, ವಿದ್ಯಾರ್ಥಿಗಳಲ್ಲಿ ಸಕಾರಾತ್ಮಕ ಚಿಂತನೆಗೆ ಅವಕಾಶ ಕಲ್ಪಿಸುತ್ತಿದ್ದರು. ಪರ್ಯಾಯವಾಗಿ ಜೀವನದ ಮೌಲ್ಯಗಳನ್ನು, ಸಾಮಾಜಿಕ ನಡವಳಿಕೆಗಳನ್ನು ತಿಳಿಸುತ್ತಿದ್ದರು.

ತಾವು ಕೆಲಸ ಮಾಡುತ್ತಿದ್ದ ಶಾಲೆಗೆ ಪ್ರತಿದಿನವೂ ಬೆಳಿಗ್ಗೆ ಬರುವಾಗ ತಮ್ಮ ಪಾದರಕ್ಷೆಗಳನ್ನು ಕಳಚಿ, ನಮಸ್ಕರಿಸಿ, ಶಾಲೆಯನ್ನು ಒಂದು ದೇವಾಲಯದಂತೆ ಪರಿಗಣಿಸುತ್ತಿದ್ದರು. ಮತ್ತು ವಿದ್ಯಾರ್ಥಿಗಳನ್ನು ತಮ್ಮ ಮಕ್ಕಳೆಂದೇ ಭಾವಿಸುತ್ತಿದ್ದರು.


ಇಂತಹ ಶಿಕ್ಷಕಕರನ್ನು ಪಡೆದ ವಿದ್ಯಾರ್ಥಿಗಳೇ ಧನ್ಯರು. ಅದೂ ಬೃಹಚ್ಚರಣ ಸಮುದಾಯದವರೇ ಆದ ಜಿ.ಕೆ.ಎನ್. ರವರು ಶ್ರೇಷ್ಠ ಶಿಕ್ಷಕರೆನಿಸಿರುವುದು ಸಮುದಾಯಕ್ಕೆ ಹೆಮ್ಮೆಯ ವಿಷಯ.

✍ ರವಿಕಿರಣ್
9448562258



(ಕನ್ನಡಕ್ಕೆ ಅನುವಾದ ರಮೇಶ್ ಆರ್.)

# ಆಚಾರ್ಯತ್ರಯರು - ಮಾರ್ಗದರ್ಶಕರು


ಶಂಕರಾಚಾರ್ಯರು


ರಾಮಾನುಜಾಚಾರ್ಯರು


ಮಧ್ವಾಚಾರ್ಯರು

**ಶಂಕರಂ ಶಂಕರಾಚಾರ್ಯಂ। ಶೇಷಂ ರಾಮಾನುಜಂ ಮುನಿಂ।**
**ವಾಯುಂಚ ಮಧ್ವಮಾಚಾರ್ಯಂ। ಆಚಾರ್ಯತ್ರಯಮಾಶ್ರಯೇ॥**

## ಶ್ರೀಶಂಕರಾಚಾರ್ಯರು

ಭಾರತದ ತತ್ತ್ವಶಾಸ್ತ್ರಜ್ಞರಾದ, ನಶಿಸುತ್ತಿದ್ದ ಹಿಂದೂ ಸಂಸ್ಕೃತಿಯನ್ನು ಎತ್ತಿ ಹಿಡಿದ ಶ್ರೀ ಶಂಕರಾಚಾರ್ಯರು ತತ್ತ್ವ ಪ್ರಚಾರಕ್ಕಾಗಿ ಕೇರಳದಿಂದ ಕಾಶ್ಮೀರದವರೆಗೆ ಕಾಲ್ನಡಿಗೆಯಲ್ಲಿ ನಡೆದು 'ಅದ್ವೈತ ಎಂದರೆ ಪ್ರಪಂಚದಲ್ಲಿ ಎರಡಿಲ್ಲ. ಎಲ್ಲವೂ ಒಂದೇ, ಪರಬ್ರಹ್ಮ. ಬ್ರಹ್ಮನು ಬೇರೆ, ನಾವು ಬೇರೆ ಅಲ್ಲ. ಪಾರಮಾರ್ಥಿಕವಾಗಿ ಮೇಲು, ಕೀಳು ಎಂಬುದಿಲ್ಲ' ಎಂದು ಸಾರಿದರು. ಇವರ ಗುರುಗಳು ಗೋವಿಂದ ಭಗವತ್ಪಾದರು. ಗುರುಗಳ ಬಳಿ ಶಾಸ್ತ್ರ ಗ್ರಂಥಗಳನ್ನೆಲ್ಲಾ ಅಧ್ಯಯನ ಮಾಡಿದರು. ಶಂಕರರದು ಅಸಾಧಾರಣ ಪ್ರತಿಭೆ. ಕಾಶಿಯಲ್ಲಿ ವಿದ್ವಾಂಸರೊಡನೆ ಅದ್ವೈತ ಮಾರ್ಗ ಕುರಿತು ವಾದ ಮಾಡಿ ಜಯಗಳಿಸಿದರು. ಕರ್ಮ ಪ್ರಧಾನ ಮಾರ್ಗವನ್ನು ಖಂಡಿಸಿ ಜ್ಞಾನ ಮಾರ್ಗವನ್ನು ಎತ್ತಿ ಹಿಡಿದರು.

ಶ್ರೀ ಶಂಕರಾಚಾರ್ಯರು ಪ್ರಸ್ಥಾನ ತ್ರಯಗಳಾದ ಉಪನಿಷತ್, ಬ್ರಹ್ಮ ಸೂತ್ರ ಮತ್ತು ಭಗವದ್ಗೀತೆಗೆ ವಿದ್ವತ್ಪೂರ್ಣವಾದ ಭಾಷ್ಯಗಳನ್ನು ಬರೆದರು. ದೇವರಿಲ್ಲ ಎಂಬ ಪಂಥವನ್ನು ವಿರೋಧಿಸಿದರು. ಪ್ರಪಂಚವನ್ನು ಮಾಯೆ ಎಂದು ಕರೆದರು. ಜಗತ್ತು ನಿತ್ಯವಲ್ಲ, ಶಾಶ್ವತವಲ್ಲ. ಬದಲಾಗುತ್ತಿರುತ್ತದೆ. ನಮ್ಮ ಅಜ್ಞಾನದಿಂದ ಬದಲಾಗುತ್ತಿರುವ ಪ್ರಪಂಚವನ್ನೇ ಸತ್ಯ ಎಂದು ಭಾವಿಸುತ್ತೇವೆ. ಎಲ್ಲದರ ಹಿಂದೆ ಇರುವ ಸತ್ಯ ಬ್ರಹ್ಮವೇ. ಬ್ರಹ್ಮನಿಗೆ ಕಾಲ, ದೇಶದ ಬಂಧನವಿಲ್ಲ. ಬ್ರಹ್ಮನು ಅನಾದಿ, ಅನಂತ, ಆವರ್ಣನೀಯ. ಈ ಬ್ರಹ್ಮನಲ್ಲಿ ಒಂದಾಗುವುದು ಆತ್ಮನ ಗುರಿಯಾಗಬೇಕು. ಇದು ಆದಿಗುರು ಶಂಕರರ ಉಪದೇಶ.

## ಶ್ರೀರಾಮಾನುಜಾಚಾರ್ಯರು

ಆಚಾರ್ಯರು ವೈಷ್ಣವ ಧರ್ಮದ ಪ್ರಭಾವದನ್ವಯ ಭಕ್ತಿ ಮಾರ್ಗವನ್ನು ಪ್ರತಿಪಾದಿಸಿದರು. ಅವರ ಗುರುಗಳಿಂದ ಅಷ್ಟಾಕ್ಷರ ಮಂತ್ರೋಪದೇಶ ಪಡೆದರು. ಅರ್ಹತೆಯನ್ನು ಪರೀಕ್ಷಿಸಿ ಆ ಮಂತ್ರವನ್ನು ಇತರರಿಗೆ ಹೇಳಿಕೊಡಬೇಕೆಂದೂ, ಆ ಮಂತ್ರದಿಂದ ಮುಕ್ತಿ ದೊರಕುತ್ತದೆಂದೂ ಗುರುಗಳು ರಾಮಾನುಜರಿಗೆ ಹೇಳಿದರು. ಎಲ್ಲರೂ ನಮ್ಮವರೇ. ಎಲ್ಲರಿಗೂ ಮುಕ್ತಿ ದೊರಕಲಿ ಎಂದು ಆಚಾರ್ಯರು ತಿರುಕೋಟಿಯೂರಿನ ನರಸಿಂಹಸ್ವಾಮಿ ದೇವಾಲಯದ ಗೋಪುರದಿಂದ ಮಂತ್ರವನ್ನು ಎಲ್ಲರಿಗೂ ಕೇಳಿಸುವಂತೆ ಉಪದೇಶಿಸಿದರು. ತಮ್ಮ 32 ವಯಸ್ಸಿನಲ್ಲಿ ಸನ್ಯಾಸಿಯಾದವರು, ಶ್ರೀರಂಗದಲ್ಲಿ ಯಮುನಾಚಾರ್ಯರ ಪೀಠಕ್ಕೆ ಬಂದರು. ಆಚಾರ್ಯರು ವಿಶಿಷ್ಟಾದ್ವೈತ ಪ್ರಚಾರಕ್ಕಾಗಿ ಭಾರತದಲ್ಲೆಡೆ ಸಂಚಾರ ಮಾಡಿದರು. ಇವರು ಸಗುಣೋಪಾಸನೆಯನ್ನು ಹೇಳಿ, ದೇವರಿಗೆ ಅನಂತ ಕಲ್ಯಾಣ ಗುಣಗಳಿವೆ. ಮುಖ್ಯವಾದುದು ಸತ್ಯ, ಸೌಶೀಲ್ಯ ಮತ್ತು ಸೌಂದರ್ಯ. ಜೀವ ಮತ್ತು ಜಗತ್ತುಗಳಿಂದ ವಿಶಿಷ್ಟವಾದ ಬ್ರಹ್ಮನನ್ನು ಬೋಧಿಸಿದ ಧರ್ಮ ವಿಶಿಷ್ಟಾದ್ವೈತ, ದೇವರನ್ನೆಲ್ಲೋ ದೂರದಲ್ಲಿರುವ ಶಕ್ತಿ ಎಂದು ಭಾವಿಸದೆ ಕರೆದರೆ ಬರುವ ತಂದೆಯಂತೆ, ತಾಯಿಯಂತೆ, ಸ್ನೇಹಿತನಂತೆ ಭಾವಿಸಬೇಕು. ದೇವರು ದಯಾಮಯ. ಭಕ್ತಿಯಿಂದ ಭಜಿಸಿದರೆ ಭಕ್ತರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಾನೆಂದು ತಿಳಿಸಿದರು. ದೇವರನ್ನು ಪ್ರೇಮ ಮೂರ್ತಿ ಎಂದರು. ಪ್ರಪಂಚ ಸುಖಕ್ಕೆ ಆಸೆ ಪಡಬಾರದು. ಗುರುಗಳು ಮತ್ತು ಆಚಾರ್ಯರ ಸೇವೆಯಿಂದ ಭಗವಂತನನ್ನು ಕಾಣಬಹುದು ಎಂದು ಉಪದೇಶಿಸಿದರು. ಆಚಾರ್ಯರು ಜಾತಿಭೇದವಿಲ್ಲದೆ ಎಲ್ಲರನ್ನೂ ತಮ್ಮ ಮತಕ್ಕೆ ಸೇರಿಸಿಕೊಂಡು, ಹಿಂದುಳಿದವರನ್ನು ಬಹಳ ಮಮತೆಯಿಂದ, ಪ್ರೇಮದಿಂದ ಕಂಡು ಅವರಿಗೆ ಭಕ್ತಿಮಾರ್ಗ ತೋರಿದರು.

## ಶ್ರೀ ಮಧ್ವಾಚಾರ್ಯರು

ಮಧ್ವಾಚಾರ್ಯರು ದ್ವೈತ ಪ್ರತಿಪಾದಕರು. ಇವರಿಗೆ ಪೂರ್ಣಪ್ರಜ್ಞ ಎಂಬ ಹೆಸರೂ ಇರುವುದರಿಂದ ದ್ವೈತಮತಕ್ಕೆ ಪೂರ್ಣಪ್ರಜ್ಞದರ್ಶನವೆಂದೂ ಹೆಸರಿದೆ. ಚಿಕ್ಕಂದಿನಿಂದ ಅಸಾಧಾರಣ ಪ್ರತಿಭೆ ತೋರಿದವರು. ವೇದಾಭ್ಯಾಸ ಮಾಡಿ ಅಚ್ಯುತ ಪ್ರೇಕ್ಷಕರೆಂಬ ಗುರುವಿನಿಂದ ಸನ್ಯಾಸ ಪಡೆದು ಶಂಕರ ಮತ್ತು ರಾಮಾನುಜರಂತೆ ಇವರೂ ಭಾರತದಲ್ಲೆಲ್ಲಾ ಸಂಚರಿಸಿ ದ್ವೈತ ಮತವು ಹರಡಲು ಶ್ರಮಿಸಿದರು. ಶ್ರೀ ಹರಿಯನ್ನು ಭಜಿಸಿ ಭಕ್ತಿಯಿಂದ ಪೂಜೆ ಮಾಡಿ ಎಂದು ತಿಳಿಸಿದರು. ಉಡುಪಿಯ ಶ್ರೀ ಕೃಷ್ಣನನ್ನು ಆಚಾರ್ಯರು ಪ್ರತಿಷ್ಠಾಪಿಸಿದರು.

ಅಷ್ಟಮಠಗಳನ್ನು ಸ್ಥಾಪಿಸಿದ್ದಲ್ಲದೆ, ಅನೇಕ ವೇದಾಂತ, ಧರ್ಮ ಗ್ರಂಥಗಳನ್ನು ಸಂಸ್ಕೃತದಲ್ಲಿ ಬರೆದರು. ಪ್ರಸ್ಥಾನತ್ರಯವಾದ ಉಪನಿಷತ್, ಬ್ರಹ್ಮಸೂತ್ರ, ಭಗವದ್ಗೀತೆಗೆ ಭಾಷ್ಯ, ಅಣು ವ್ಯಾಖ್ಯಾನ, ಮಹಾಭಾರತ ತಾತ್ಪರ್ಯ ನಿರ್ಣಯ, ಇವೇ ಮುಂತಾದ 32 ಗ್ರಂಥಗಳನ್ನು ರಚಿಸಿದ್ದಾರೆ.

ಪರಮಾತ್ಮನು ಎಲ್ಲವನ್ನೂ ಬಲ್ಲವನು. ಅವನ ಶಕ್ತಿಗೆ ಮಿತಿ ಇಲ್ಲ. ಎಲ್ಲೆಡೆ ಇರುವ ಅವನಿಗೆ ಹುಟ್ಟು, ಸಾವು ಇಲ್ಲ. ದೋಷ, ಗುಣ ರಹಿತನು ಎಂದು ತಿಳಿಸಿದರು. ದ್ವೈತ ಎಂದರೆ ಭೇದ. ಜೀವರಿಗೂ, ಪರಮಾತ್ಮನಿಗೂ ಭೇದ ಇದೆ. ಜೀವ, ಜಡಗಳಿಗೂ ಭೇದ ಉಂಟು. ಬ್ರಹ್ಮ, ಜೀವ, ಜಗತ್ತು ಎಲ್ಲವೂ ಇದೆ. ಆದರೆ ಬೇರೆ, ಬೇರೆಯಾಗಿದ್ದು, ಪರಮಾತ್ಮನಿಗೆ ಅಧೀನ ಎಂದು ದ್ವೈತ ಮತವು ಹೇಳುತ್ತದೆ. ಇದರಲ್ಲಿ ವಿಷ್ಣುವಿಗೆ ಅಗ್ರಸ್ಥಾನ, ನಂತರ ವಾಯುವಿಗೆ ಮುಖ್ಯ ಸ್ಥಾನವಿದೆ. ಜೀವಿಗಳು ಜನನ, ಮರಣ, ಸುಖ, ದುಃಖ ಇತ್ಯಾದಿ ದೋಷಗಳಿಂದ ಕೂಡಿದವರು. ಜೀವ ಜಡ, ಬ್ರಹ್ಮ, ಜಗತ್ತು ಎಲ್ಲದರಲ್ಲೂ ಭೇದವನ್ನು ಗುರುತಿಸುವುದರಿಂದಲೇ ದ್ವೈತ ಎಂದು ಹೆಸರು.

**ಎಸ್. ಶ್ರೀನಿವಾಸಯ್ಯ**
ನಿವೃತ್ತ ಶಿಕ್ಷಕರು, ಕಿತ್ತಗಾನಹಳ್ಳಿ



# ದೀಪಾವಳಿ ವಿಶೇಷ ಲೇಖನ



**ದೀಪವೆಂದರೆ**

- ಕತ್ತಲೆಯ ಬೆನ್ನ ಹುರಿ ಮುರಿದು ಬೆಳಕಿನ ಕುದುರೆಯೇರಿ ಕುಣಿಯುವ ಬಿಳಿಯ ನೊರೆ.
- ಕಾಣಿಸುವುದಕ್ಕೆ ಕುಣ್ಕೆಯಾಗುವ, ಕಂಡದ್ದು ಮನವರಿಕೆಯಾಗುವ, ಮನವರಿಕೆಯಾದದ್ದು ತಿಳಿವಳಿಕೆಯಾಗುವ ಮಿಂಚಿನ ಧಾರೆ!
- ಕಣ್ಣು ಮುಚ್ಚಿ ಕುಳಿತರೂ, ಹುಬ್ಬಿನ ನಡುವೆ ಚುಕ್ಕಿಯಾಗಿ ಉಳಿಯುವ ಬೆಳ್ಳಿ ಹಕ್ಕಿ.
- ಮೌನಕ್ಕೊಂದು ಹೆಸರು ಕೊಡುವ, ಧ್ಯಾನಕ್ಕೆ ಉಸಿರು ನೀಡುವ, ಜೀವನ ಮನನಕ್ಕೆ ಹಸಿರು ತುಂಬುವ ದಿವ್ಯಜ್ಯೋತಿಯ ಮೌನ ಮೆರವಣಿಗೆ!
- ಗರ್ಭದೊಳಗೆ ಬೆಚ್ಚಗೆ ಮಲಗಿರುವ ಶಿಶುವಿನ ಕತ್ತಲಿನ ಭಯ ಕಾಣದಂತೆ ಕಾಪಾಡುವ ತಾಯಿಯ ಉಸಿರೆನ್ನುವ ವಾತ್ಸಲ್ಯದ ಆಸರೆ!
- ಆಟವಾಡುವ ಮಗುವಿಗೆ ಗುಮ್ಮನ ಹೆದರಿಕೆಯೋಡಿಸಲು ಅಮ್ಮ ಹಚ್ಚಿಟ್ಟ ಅಭಯದ ಪ್ರೀತಿ!
- ಯೌವನದ ಹುಡುಗಾಟಕ್ಕೆ ಶಿಕ್ಷಣ ಮಾತ್ರ ತೀಡಬಲ್ಲ ಅಕ್ಷರ ಜ್ಯೋತಿ!
- ಮಧ್ಯಮ ವಯಸ್ಸಿನ ಮಹತ್ವಾಕಾಂಕ್ಷೆಗೆ, ಆ ದಿನಗಳ ದುಗುಡ, ಆತಂಕಗಳ, ಕುಟುಂಬ ಜೀವನದ ಕನಸುಗಳಿಗೆ ಭರವಸೆ ಭಾವ ತುಂಬುವ ದಾಂಪತ್ಯ ಗೀತೆ!
- ಮುಪ್ಪಿನ ಮುಸ್ಸಂಜೆಯಲ್ಲಿ ಕಾಡುವ, ಕಂಗೊಳಿಸುವ ಸಾವಿನ ಭಯವನ್ನು ಕತ್ತಲೆಯಿಂದ ಹೆಕ್ಕಿ ತೆಗೆದು ಬಯಲಾಗಿಸುವ ಬೆಳ್ಳಂ ಬೆಳಗಿನ ಆಶಾಕಿರಣ!
- ಅಜ್ಜನಿಗೆ, ಮೊಮ್ಮಗನ ಅಪ್ಪುಗೆ ನೀಡಿ ಸಾವಿನ ಬಳಿಕವೂ ಬದುಕು ಮುಂದುವರೆಯುತ್ತದೆ ಎನ್ನುವ ನಿರಂತರತೆಯ ಪಾಠ ಕಲಿಸುವ ಗುರುಜ್ಯೋತಿ!
- ಸೂರ್ಯನ ಕೆಂಪು ಚಂದ್ರನ ತಂಪು, ತಾರೆಯ ಹೊಳಪುಗಳೆಲ್ಲಾ ಮನೆಯ ಕದ ತಟ್ಟಿ ತೇಲಾಡುವ ಆಕಾಶಬುಟ್ಟಿ!
- ಮನಸ್ಸಿನಿಂದ, ಮನಸ್ಸಿಗೆ ನಿರಾಯಾಸವಾಗಿ ದಾಟಿ, ಸಂಬಂಧಗಳನ್ನು ಗಟ್ಟಿ ಮಾಡಿ ಅಕ್ಕನ ಅಕ್ಕರೆ ಅನುಬಂಧಕ್ಕೆ, ಸಹೋದರನ ಸಹವಾಸಕ್ಕೆ ಹೊಸರೂಪ ಕೊಡುವ ರೂಪದರ್ಶಿ
- ಗಿಡಮರಗಳನ್ನು ಮುತ್ತಿ. ಗದ್ದೆಗೊಂದು ಸುತ್ತು ಹಾಕಿ, ಕಾಡಿನೊಳಗೂ ನುಸುಳಿ, ನದಿಯಲ್ಲಿ ಮುಳುಗಿ, ಸಮುದ್ರದಲ್ಲಿ ಮೇಲೆದ್ದು ಬಂದು, ಎಲ್ಲೆಂದರಲ್ಲಿ ಪ್ರಾಣದ ಬೆಳೆ ತೆಗೆಯುವ ಮಹಾಕೃಷಿಕ!
- ಏಕಸೂತ್ರದಲ್ಲಿ ಸೂರ್ಯನನ್ನು ಸತ್ತಿಗೆ, ಚಂದ್ರನನ್ನು ಚಿತ್ರಕ್ಕೆ ತುಂಬಿಸಿ, ಇರುವುದೆಲ್ಲವನ್ನು ಪ್ರತಿಬಿಂಬಿಸುವ ಮನೆಯೊಳಗೆ ಪ್ರತಿ ಸೂರ್ಯನನ್ನು, ಪ್ರತಿಷ್ಠಾಪಿಸುವ, ಹಣತೆಯೆನ್ನುವ ಮಣ್ಣಿನ ಮಗು!
- ಒಂದು ಕುಟುಂಬವನ್ನಲ್ಲ, ಒಂದು ನಾಡನ್ನಲ್ಲ ಇಡೀ ವಿಶ್ವವನ್ನು ವ್ಯಾಪಿಸುವ ಪರಮಾತ್ಮನ ಪಾವನ ನಗು!
- ಸಾರ್ಥಕವೆನ್ನುವ, ಸೀಮಿತ ಸಾಮಿಪ್ಯದಿಂದ ನಿಸ್ವಾರ್ಥದ ಅಪರಿಮಿತ ಸನ್ನಿಧಿಗೆ ಕೈ ಹಿಡಿದು ನಡೆಸುವ ಕರುಣೆಯ ಬೆಳಕು!
- ಇರುವ ಭೂಮಿ ನಮಗೆ ಮಾತ್ರ ಸೇರಿದ್ದಲ್ಲ ಎನ್ನುವ ಸತ್ಯವನ್ನು ಹೇಳುತ್ತಾ, ಇದು ಕ್ರಿಮಿ ಕೀಟಗಳಿಗೆ, ಎಲ್ಲಾ ಜೀವ ಜಂತುಗಳಿಗೆ, ದನಕರುಗಳಿಗೆ, ಹುಲಿ, ಸಿಂಹ, ಆನೆಗಳಿಗೆ ಸೇರಿದ್ದು ಎನ್ನುವ ಸಮನ್ವಯ ಸಂವೇದನೆಯನ್ನು ಸುಮ್ಮನೆ ಸ್ಮರಿಸುವ ಕಣ್ಣಿಗೆ ಬೆಳಕು!
- ಅನ್ನದೊಳಗಿನ ಪ್ರಾಣಶಕ್ತಿ, ನೀರಿನೊಳಗಣ ರಕ್ಷಶಕ್ತಿ, ಹೆಜ್ಜೆಯ ಮೇಲೆ ಹೆಜ್ಜೆಯನಿಡುತ್ತಾ ನಡೆಯುವ ಭೂಮಿಯ ಕಾಂತ ಶಕ್ತಿ, ನಿದ್ದೆಯಲ್ಲೂ ನಮ್ಮ ಜೊತೆಯೇ ಇರುವ ಭಗವಂತನ ಶಕ್ತಿ!
- ನಂಬಿಕೆ ಮಾತ್ರ ಹೊರಹೊಮ್ಮಿಸಬಲ್ಲ ವಿಶ್ವಾಸದ ಪ್ರಜ್ವಲ ಬೆಳಕು!
- ಮಹಾವೀರನ ಅಹಿಂಸೆ, ಬುದ್ಧನ ಕರುಣೆ, ಶ್ರೀರಾಮನ ಆದರ್ಶ, ಕೃಷ್ಣನ ಆಕರ್ಷಣೆ ಮತ್ತು ಜಗತ್ತಿನ ಎಲ್ಲಾ ತಾಯಂದಿರ ವಾತ್ಸಲ್ಯ!
- ಆಯುಷ್ಯ, ಆರೋಗ್ಯ, ಆಶೀರ್ವಾದ
- ಸಂಪತ್ತು, ಸಂಬಂಧ, ಸಮನ್ವಯ
- ಲಕ್ಷ್ಮಿ, ಸರಸ್ವತಿ, ಶಾರದ
- ಮಂದ ಬೆಳಕಿನ ದೂರದಲ್ಲಿ ಬರುತ್ತಿರುವ ಅಪರಿಚಿತನೊಬ್ಬ ಸ್ವಂತ ತಮ್ಮನ ಹಾಗೆ ಕಾಣುವುದು.
- ಎತ್ತ ನೋಡಿದರೆ ಅತ್ತ ನಮ್ಮವರ ಕಂಡು ಬೆರಗಾಗುವುದು ಮತ್ತು ಆ ಬೆಳಕಿನಡೆ ಕ್ಷಣ ಕ್ಷಣವನ್ನು ಕಲೆಯುವುದು
- ಅದಕ್ಕೆ ದೀಪಾವಳಿ ನಮ್ಮ ಹಬ್ಬ, ನಿಮ್ಮ ಉತ್ಸಾಹ ಮತ್ತು ನಮ್ಮೆಲ್ಲರ ಬೆಳಕಿನ ಜಾತ್ರೆ!
- ಕೊನೆಗೂ, ದೀಪವೆಂದರೆ ಈ ಜಗವನ್ನು ವಿಸ್ಮಯದಿಂದ ನೋಡುವ ನಮ್ಮ ಕಣ್ಣುಗಳು! ಕಣ್ಣುಗಳಿಗೆ ಬೆಳಕು ಅಂಟಿಕೊಳ್ಳುವುದಿಲ್ಲ.
- ಜಗತ್ತು ಕೂಡ ಹಾಗೆಯೇ, ಬೆಳಕು ಹರಡುತ್ತದೆ ಬಯಲಾಗುತ್ತದೆ. ಬಲವಾಗುತ್ತಾ ಹೋಗುತ್ತದೆ. ದೀಪ ಮುಗಿಯುವುದರಲ್ಲೆ ನಮ್ಮ ನಿಜರೂಪ ಅಡಗಿದೆ.
- ದೀಪವೆಂದರೆ, ನಾವು ಹೇಳುವ ಕೇಳುವ ನಂಬಿಕೆಯ ಕಥೆಗಳು ಮತ್ತು ಆ ಕಥೆಗಳಲ್ಲಿ ಜೀವ ಪಡೆಯುವ ನಮ್ಮ ನಮ್ಮ ಬಾವುಕತೆಗಳು
- ದೀಪವೆಂದರೆ ಭಕ್ತಿ, ಭಕ್ತನ ಶರೀರದಲ್ಲಿ ಉರಿಯುವ ಜ್ಯೋತಿಯೇ ಭಕ್ತಿ, ಇದು ಶರಣಾಗತಿಯನ್ನು ಕಲಿಸುತ್ತಾ, ದೇವರನ್ನು ಒಲೈಸುವ ಆತ್ಮ ಶಕ್ತಿ.
- ಆತ್ಮ ಶಕ್ತಿಯೆನ್ನುವ ದೀಪ ಅಂತರಂಗದಲ್ಲಿ ಉರಿಯುತ್ತಿರುವಾಗ ಮಾತ್ರ ಬದುಕು ಸಾರ್ಥಕವಾಗುತ್ತದೆ. ಹಿಡಿದ ಕೆಲಸ ಪೂರ್ಣವಾಗುತ್ತದೆ.

ಅದಕ್ಕೆ ಮನೆ ಎಂದ ಮೇಲೆ, ಒಂದು ದೀಪ ಉರಿಯುತ್ತಿರಬೇಕು. ಮನೆಯಿಂದ ಮೇಲೆ ಅಲ್ಲೂ ಜ್ಯೋತಿಯೊಂದು ಪ್ರಜ್ವಲಿಸುತ್ತಿರಬೇಕು.

**ಶ್ರೀನಿವಾಸಯ್ಯ**
ನಿವೃತ್ತ ಪ್ರೌಢಶಾಲಾ ಮುಖ್ಯ ಶಿಕ್ಷಕರು, ಕಿತ್ತಿಗಾನಹಳ್ಳಿ

## 'ವಿದ್ಯಾನಿಧಿ'ಗೆ ದೇಣಿಗೆ ನೀಡಿರುವ ಸದಸ್ಯರು

(ಹಿಂದಿನ ಸಂಚಿಕೆಯಿಂದ)

ಶ್ರೀಯುತರುಗಳಾದ

| | | |
|---|---|---|
| 16. | ಶಿಲ್ಪಾ ಶ್ರೀನಿವಾಸ್ | 6,000 |
| 17. | ಸಂಜಯ್ ರಾಜಾಪುರ್ | 5,000 |
| 18. | ರಘುನಾಥ್ ಈಶ್ವರನ್ | 5,000 |
| 19. | ರಾಧಾ ನಾಗಭೂಷಣ್ ಶಾಸ್ತ್ರೀ | 5,000 |
| 20. | ಆರ್. ಚಂದ್ರಮೌಳಿ | 5,000 |
| 21. | ಕಲ್ಯಾಣರಾಮನ್ ಚಂದ್ರಶೇಖರ್ | 3,500 |
| 22. | ವಿ. ಶ್ರೀನಿವಾಸ ಮೂರ್ತಿ | 2,500 |
| 23. | ಶ್ರೀನಿವಾಸ್ ಆನಂದ ರಾವ್ | 2,500 |
| 24. | ಅರ್. ಎಸ್. ರಾಮಕೃಷ್ಣ | 2,000 |
| 25. | ಕೆ. ಬಿ. ದಾಸ್ | 1,500 |
| 26. | ಎಚ್.ಕೆ.ಚೇತನ್, ಸದಾನಂದ್ | 1,000 |
| 27. | ಜಿ. ಎನ್. ನಾಗಪ್ರಕಾಶ್ | 501 |
| 28. | ಎಸ್. ಆರ್. ಬಾಲಸುಬ್ರಹ್ಮಣ್ಯ | 500 |
| 29. | ವೆಂಕಟಸುಬ್ಬಯ್ಯ | 250 |
| 30. | ಕೆ. ಎಲ್. ಸುಂದರೇಶ್ | 250 |
| 31. | ನಾಗವೇಣಿ | 250 |

# ಪ್ರಕೃತಿಯೇ ಗುರು- ಅವಧೂತ ಗೀತೆ

ಭಗವಾನ್ ವೇದವ್ಯಾಸ ವಿರಚಿತ 18 ಪುರಾಣಗಳಲ್ಲೊಂದಾದ ಶ್ರೀಮದ್ ಭಾಗವತದ ಏಕಾದಶ ಸ್ಕಂದ 9 ನೇ ಅಧ್ಯಾಯದಲ್ಲಿ ಈ ಅವಧೂತ ಗೀತೆಯು ಉಲ್ಲೇಖವಾಗಿದೆ. ಇದು ಶ್ರೀಕೃಷ್ಣನು ಭಕ್ತ ಉದ್ಧವನಿಗೆ ಗುರುಗಳ ವಿಷಯ ತಿಳಿಸಿದಂತಹುದು. ಇದರಲ್ಲಿ ಬರುವ ವಿಚಾರವೇನೆಂದರೆ, ಚಂದ್ರ ವಂಶಸಂಜಾತ ಯದುಮಹಾರಾಜನಿಗೆ ಅವಧೂತ ದತ್ತಗುರುಗಳು ತಾವು ಪ್ರಕೃತಿಯಲ್ಲೇ ಗುರುಗಳನ್ನು ಕಂಡುಕೊಂಡು, ಅದರಿಂದ ಪಾಠ ಕಲಿತು, ಜೀವನದಲ್ಲಿ ಸರ್ವದಾ ಆನಂದವಾಗಿರುವುದು ಹೇಗೆಂಬುದನ್ನು ತಿಳಿಸಿರುವುದೇ ಆಗಿದೆ.

ಒಮ್ಮೆ ಯದುವಿಗೆ ತನಗೆ ಸಕಲ ಸೌಭಾಗ್ಯಗಳಿದ್ದರೂ ತಾನು ನೆಮ್ಮದಿ ಕಳೆದುಕೊಂಡಿರುವ ಭಾವನೆಯುಂಟಾಯಿತು. ಹೀಗಿರುವಾಗ ಒಬ್ಬ ಅವಧೂತರ ದರ್ಶನವಾಯಿತು. ಮಹಾರಾಜನು ಆ ಅವಧೂತರ ಮುಖದಲ್ಲಿ ಆನಂದ, ತೇಜಸ್ಸುಗಳನ್ನು ಕಂಡು ಆಶ್ಚರ್ಯ ಚಕಿತನಾದನು. ಏಕೆಂದರೆ ಅವಧೂತ ಎಂದರೆ ಪ್ರಾಪಂಚಿಕ ವಸ್ತುಗಳ ಬಯಕೆ ಇಲ್ಲದೆ, ಸದಾ ಒಂದೇ ಕಡೆ ನೆಲೆಸದೆ ಪರಿವ್ರಾಜಕರಾಗಿರುವಂತಹವರು. ತನಗೆ ದೊರಕದೆ ಇಲ್ಲದ್ದಕ್ಕಾಗಿ ಬಯಸದೆ, ದೊರಕಿದ್ದನ್ನು ಸ್ವೀಕರಿಸುವಂತಹುದು ಅವರ ಲಕ್ಷಣ. ಹೀಗಿರುವಂತಹವರಿಗೆ ಆನಂದವು ಯಾವುದೇ ಅವಲಂಬನೆ ಇಲ್ಲದೆ ಹೇಗೆ ದೊರಕಿದೆ ಎಂಬ ಪ್ರಶ್ನೆ ಉಂಟಾಯಿತು. ಅದಕ್ಕೆ ಅವಧೂತ ದತ್ತ ಗುರುಗಳು ತನಗೆ ಪ್ರಕೃತಿಯಲ್ಲಿನ ವಿಚಾರಗಳಲ್ಲಿ ಭಗವಂತನ ದರ್ಶನವಾಗಿದೆ ಎಂದು ತಿಳಿಸಿ ಇಲ್ಲಿ 24 ಚರಾಚರ ವಸ್ತುಗಳಲ್ಲಿ ಗುರುತ್ವವನ್ನು ಕಂಡುಕೊಂಡು ಅವುಗಳಿಂದ ತಾನು ಪಾಠ ಕಲಿತಿದ್ದಾಗಿ ತಿಳಿಸಿದರು.

- ❖ ಭೂಮಿ=ಎಲ್ಲಾ ಭಾರ ಸಹಿಸಿಕೊಂಡ ಕ್ಷಮಾಗುಣ, ಪರೋಪಕಾರತೆ
- ❖ ವಾಯು = ಶರೀರದ ನಿರ್ವಹಣೆ ಸಾಧನೆಗಾಗಿ ಅಗತ್ಯ ಆಹಾರ ಸೇವನೆ, ನಿಸ್ಸಂಗತ್ವ.
- ❖ ಆಕಾಶ = ಗುಣಾತೀತತೆ, ವ್ಯಾಪಕತ್ವ
- ❖ ಜಲ = ಸ್ನೇಹ, ಮಧುರ ಭಾಷೆ, ನಿರ್ಮಲತ್ವ
- ❖ ಅಗ್ನಿ = ಜ್ಞಾನ, ತೇಜಸ್ಸು, ದೋಷರಾಹಿತ್ಯತೆ
- ❖ ಚಂದ್ರ = ಜನನ ಮರಣಾದಿಗಳು ಆತ್ಮನಿಗಿಲ್ಲ ಎಂಬುದು
- ❖ ಸೂರ್ಯ = ಅಭೇದಜ್ಞಾನ, ಉಪಾದಿರಹಿತತ್ವ, ಅನೇಕದಲ್ಲಿ ಏಕತ್ವ ದರ್ಶನ.
- ❖ ಪಾರಿವಾಳ = ಅತಿ ಅಂಟು, ನಂಟು ಮುಮುಕ್ಷುಗಳಿಗೆ ಸಲ್ಲದು.
- ❖ ಅಜಗರ ಸರ್ಪ = ಪ್ರಾರಬ್ಧ ಕರ್ಮ ಅನುಭವಿಸದೇ ತೀರದು.
- ❖ ಸಿಂಧು (ಸಮುದ್ರ) = ಸುಖದುಃಖಗಳಲ್ಲಿ ಸಮತ್ವ
- ❖ ಪತಂಗದ ಹುಳು = ಭೋಗದಿಂದ ಶಾಶ್ವತ ಸುಖ ದೊರಕದು.
- ❖ ಜೇನುಹುಳು = ಸಕಲ ಶಾಸ್ತ್ರ ಸಾರ ಸಂಗ್ರಹಿಕೆ
- ❖ ಆನೆ= ಸಂಸಾರ ಬಂಧನ (ಹುಟ್ಟು, ಸಾವಿನ ಚಕ್ರಕ್ಕೆ ಸಿಲುಕಿ ನಲುಗುವುದು)
- ❖ ಜೇನು ಸಂಗ್ರಹಕ = ಲೋಭಿತನದಿಂದ ತನಗೂ ಪರರಿಗೂ ಸುಖವಿಲ್ಲ.
- ❖ ಜಿಂಕೆ = ಮನೋವಿಕಲ್ಪತೆ ಸಲ್ಲದು.
- ❖ ಮೀನು = ಜಿಹ್ವಾ ಚಾಪಲ್ಯ ನಿಗ್ರಹ.
- ❖ ಪಿಂಗಳೆ ಎಂಬ ಹೆಣ್ಣು = ಆಶಾ ಪರಿಮಿತಿಯೇ ಪರಮ ಸುಖ.
- ❖ ಕುರರ ಪಕ್ಷಿ = ಆದ್ಯಂತ ದುಃಖ ರಹಿತತೆ
- ❖ ಮಗು = ಮುಗ್ಧತೆ, ಮಾನ ಅಪಮಾನ ರಹಿತತೆ
- ❖ ಕುಮಾರಿ = ನಾನಾತ್ವದಿಂದ ಮನೋಕ್ಲೇಶ
- ❖ ಬಿಲ್ಲುಗಾರ = ಏಕಾಗ್ರತೆ, ಗುರಿದರ್ಶನ
- ❖ ಸರ್ಪ = ಭೋಗ ರಹಿತ ಜೀವನ, ನಿರತಿಶಯ ಸುಖ
- ❖ ಜೇಡರಹುಳು = ಸೃಷ್ಟಿ, ಸ್ಥಿತಿ, ಲಯ ಕಾರಣ ಪರಮಾತ್ಮ
- ❖ ರೇಷ್ಮೆ ಹುಳು = (ಭ್ರಮರ) ಸದಾ ಸತ್ ಚಿಂತನೆಯ ಅವಶ್ಯಕತೆ

ಇವುಗಳನ್ನು ನೋಡಿ ಕಲಿತು, ಜೀವನದಲ್ಲಿ ಅನುಸಂಧಾನ ಮಾಡಿದಾಗ, ಯಾವುದೇ ದುಃಖವಿಲ್ಲದೆ ಆದ್ಯಂತಿಕ ಸುಖವನ್ನು ಪಡೆಯಬಹುದು. ಇದು ಆತ್ಮೋದ್ಧಾರದ ಮಾರ್ಗೋಪಾಯ ಎಂದು ಅವಧೂತನು ತಾನು ಕಂಡುಕೊಂಡ 24 ಗುರುಗಳ ವಿಶೇಷತೆಯನ್ನು ಸವಿಸ್ತಾರವಾಗಿ ಉಪದೇಶಿಸಿದನು.

ಮಾನವನು ಇದರಂತೆ ಹುಟ್ಟಿನಿಂದ ಸಾಯುವವರೆಗೆ ತನ್ನ ಸಂಪರ್ಕಕ್ಕೆ ಬರುವ ವಸ್ತು, ವ್ಯಕ್ತಿ, ವಿಚಾರಗಳಲ್ಲಿ ಗುರುತ್ವವನ್ನು ಕಂಡುಕೊಂಡು ಪ್ರತಿ ಘಟನೆಯಿಂದ ಶಿಷ್ಯನಂತೆ ಪಾಠ ಕಲಿತು ಅನುಸರಿಸಿದರೆ ಯಾವುದೇ ಚಿಂತೆಯಿಲ್ಲದೆ ನಿಶ್ಚಿಂತೆಯಾಗಿ ಬದುಕಿ ಇತರರಿಗೂ ಮಾರ್ಗದರ್ಶಿ ಆಗಬಹುದು.

ಇತ್ತೀಚಿನ ದಿನಗಳಲ್ಲಿ ಅಂತಹವರು ನಮ್ಮ ನಡುವೆಯೇ ಇರುವುದನ್ನು ನಾವು ಗಮನಿಸಬೇಕು. ಯಶಸ್ಸನ್ನು ಕಂಡ ಪ್ರತೀ ವ್ಯಕ್ತಿಯಲ್ಲಿ ಈ ಗುಣಗಳನ್ನು ಗುರುತಿಸುವ ಗುಣವನ್ನು ನಾವು ಬೆಳೆಸಿಕೊಳ್ಳಬೇಕು.

ನಮ್ಮ ಸಮುದಾಯದವರೇ ಆದ ದಿವ್ಯ ಜ್ಞಾನಿ ಗುಂಡಪ್ಪ, ಭಾರತರತ್ನ ಇಂಜಿನಿಯರ್ ಸರ್. ಎಂ. ವಿಶ್ವೇಶ್ವರಯ್ಯ, ಸಂಗೀತ ವಿದೂಷಿ ಶ್ರೀಮತಿ ಎಂ.ಎಸ್. ಸುಬ್ಬುಲಕ್ಷ್ಮಿ, ದೇವುಡು ನರಸಿಂಹಶಾಸ್ತ್ರಿ, ಮುಕುಂದೂರು ಸ್ವಾಮಿಗಳು, ಸಾಹಿತಿ ವಿ. ಸೀತಾರಾಮಯ್ಯ, ಜ್ಞಾನಪೀಠ ಪ್ರಶಸ್ತಿ ವಿಜೇತ ದ.ರಾ. ಬೇಂದ್ರೆ, ಬೆಳೆಗೆರೆ ಕೃಷ್ಣಶಾಸ್ತ್ರಿಗಳು, ಭಾರತದ ಮಾಜಿ ರಾಷ್ಟ್ರಪತಿ ಭಾರತ ರತ್ನ ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂ, ಇನ್ಫೋಸಿಸ್ ಸ್ಥಾಪಕರಾದ ಶ್ರೀ ನಾರಾಯಣ ಮೂರ್ತಿ ದಂಪತಿಗಳು ಇನ್ನೂ ಹಲವರು ಇಂತಹವರು ಉಲ್ಲೇಖಾರ್ಹರು.

ನಾವೂ ಪ್ರಕೃತಿಯಲ್ಲಿನ ಚರಾಚರಗಳಲ್ಲಿ ಗುರುತ್ವದರ್ಶನದ ಯೋಗ್ಯತೆ ಗಳಿಸಿದರೆ ದೈವಕೃಪೆಯು ಸದಾ ನಮ್ಮೊಡನೆ ಇರುವ ಅರಿವು ಮೂಡುತ್ತದೆ. ಈ ನಿಟ್ಟಿನಲ್ಲಿ ನಮ್ಮ ಸಾಧನೆ, ಅಭ್ಯಾಸ ಸಾಗುವಂತಾಗಲಿ.

✍ ಆರ್. ರಮೇಶ್
9886034048



# ಸಂಘದ ವಾರ್ಷಿಕ ನಿರ್ವಹಣಾ ವೆಚ್ಚಕ್ಕೆ ದೇಣಿಗೆ ನೀಡಿರುವ ಸದಸ್ಯರು

**ಶ್ರೀಯುತರುಗಳಾದ**

| | | |
|---|---|---|
| 1. | ನಾಗರತ್ನ ಶರ್ಮ | 500–00 |
| 2. | ಕೆ. ಎಸ್. ಮಧುಸೂದನ್ | 500–00 |
| 3. | ಎಸ್. ಎನ್. ಕೃಷ್ಣಮೂರ್ತಿ | 500–00 |
| 4. | ವೆಂಕಟಸುಬ್ಬಯ್ಯ | 500–00 |
| 5. | ಕೆ. ಎಲ್. ಸುಂದರೇಶ್ | 500–00 |
| 6. | ನಾಗವೇಣಿ | 500–00 |
| 7. | ಶ್ರೀಮತಿ | 500–00 |
| 8. | ನರಸು ರಾಮಚಂದ್ರ | 500–00 |
| 9. | ಬಿ. ಎನ್. ಜಿ. ಪ್ರಸಾದ್ | 500–00 |
| 10. | ಬಿ. ಎನ್. ಜಿ. ಕುಮಾರ್ | 500–00 |
| 11. | ಎನ್. ಬಿ. ವಿನಯ್ | 500–00 |
| 12. | ಎನ್. ಚಂದ್ರಶೇಖರಯ್ಯ | 500–00 |
| 13. | ಸಿ. ಪ್ರಸಾದ್ | 500–00 |
| 14. | ಸರಸ್ವತಿ ನಟರಾಜ್ | 500–00 |
| 15. | ಎ. ಆರ್. ಗುರುರಾವ್ | 500–00 |
| 16. | ಕೆ. ಜಿ. ಶ್ರೀನಿವಾಸ್ | 500–00 |
| 17. | ಬಾಲಸುಬ್ರಹ್ಮಣಿ ಶ್ರೀನಿವಾಸ್ | 500–00 |
| 18. | ಸಿ. ಎಸ್. ಶ್ರೀನಿವಾಸ ಮೂರ್ತಿ | 500–00 |
| 19. | ರಘುನಾಥ್ ಈಶ್ವರನ್ | 500–00 |
| 20. | ಬಿ. ಶೇಷಾಚಲ | 500–00 |
| 21. | ಕೆ. ಜಿ. ವೆಂಕಟೇಶ್ | 500–00 |
| 22. | ಟಿ. ಆರ್. ನೇತ್ರಾನಂದ | 500–00 |
| 23. | ಆರ್. ಎಸ್. ಗಜೇಂದ್ರನ್ | 500–00 |
| 24. | ಶ್ರೀಹರಿ ಉಡುಪ | 500–00 |
| 25. | ರಾಧಾ ನಾಗಭೂಷಣ್ ಶಾಸ್ತ್ರಿ | 500–00 |
| 26. | ಕೆ. ಸಿ. ಜಯರಾಮ್ | 500–00 |
| 27. | ಅರುಣ್ ಜೆ ಕಾರ್ತಿಕ್ | 500–00 |
| 28. | ಎನ್. ವಿ. ಸುಂದರ್ | 500–00 |
| 29. | ಬಿ. ಪಿ. ಸರಸ್ವತಿ | 500–00 |
| 30. | ಬಿ. ಇ. ಸಂಧ್ಯಾ | 500–00 |
| 31. | ಎಸ್. ಚಂಪಕಧಾಮ್ | 500–00 |
| 32. | ಜಿ. ಇಂದಿರಮ್ಮ | 500–00 |
| 33. | ಭ್ರಮರಾ ಗೋಪಿನಾಥ್ | 500–00 |
| 34. | ಆರ್. ಎ. ಶಾಮ್ ಸುಂದರ್ | 500–00 |
| 35. | ಆರ್. ಎ. ಶ್ರೀಕಂಠ್ | 500–00 |
| 36. | ಜಿ. ವಿ. ಬಾಲಸುಬ್ರಹ್ಮಣ್ಯ | 500–00 |
| 37. | ಎಚ್. ಪಿ. ವೇಣುಗೋಪಾಲ್ | 500–00 |
| 38. | ಕಲ್ಯಾಣರಾಮನ್ ಚಂದ್ರಶೇಖರ್ | 500–00 |
| 39. | ಕೆ. ಟಿ. ಚಂದ್ರಶೇಖರ್ | 500–00 |
| 40. | ಶೇಷಾದ್ರಿ ವಾಸು | 500–00 |
| 41. | ಎಸ್. ವಾಸು | 500–00 |
| 42. | ಎಚ್. ಡಿ. ಗಣೇಶ್ | 500–00 |
| 43. | ಎಚ್. ಜಿ. ಅರುಣ್ | 500–00 |
| 44. | ಎ. ಆರ್. ಕೃಷ್ಣಶರ್ಮ | 500–00 |
| 45. | ವಿದ್ಯಾ ಮೂರ್ತಿ | 500–00 |
| 46. | ಆರ್. ಎ. ದಕ್ಷಿಣಾಮೂರ್ತಿ | 500–00 |
| 47. | ಆರ್. ಎ. ಶ್ರೀನಿವಾಸ್ | 500–00 |
| 48. | ಎಸ್. ಶ್ರೀನಿವಾಸನ್ | 500–00 |
| 49. | ಆರ್. ಎನ್. ಸ್ವಾಮಿನಾಥನ್ | 500–00 |
| 50. | ಆರ್.ಎನ್. ವೆಂಕಟಸುಬ್ಬರಾವ್ | 500–00 |
| 51. | ಟಿ. ಎಸ್. ಮಣಿ | 500–00 |
| 52. | ಮೀರಾ ಕೃಷ್ಣಮೂರ್ತಿ | 500–00 |
| 53. | ಎನ್. ಗಣೇಶನ್ | 500–00 |
| 54. | ನಾಗರಾಜನ್ ಎಸ್. ಮೈಸೂರು | 500–00 |
| 55. | ಎಸ್. ಆರ್. ಬಾಲಸುಬ್ರಹ್ಮಣ್ಯ | 500–00 |
| 56. | ಶ್ರೀನಿವಾಸ್ ಆನಂದ ರಾವ್ | 500–00 |
| 57. | ಬೆಳ್ಳಾವೆ ನಾಗರಾಜ್ | 500–00 |
| 58. | ಆರ್. ಎಸ್. ವೆಂಕಟೇಶ್ | 500–00 |
| 59. | ಲಲಿತಾ ಮೂರ್ತಿ | 500–00 |
| 60. | ಬಿ. ಪಿ. ಶ್ರೀಧರಮೂರ್ತಿ | 500–00 |
| 61. | ಕೆ. ಮಂಜುನಾಥ್ | 500–00 |
| 62. | ಎಮ್. ಆರ್. ಜಯರಾಮನ್ | 500–00 |
| 63. | ಆರ್. ಎಸ್. ರವಿಕುಮಾರ್ | 500–00 |
| 64. | ಪಿ. ಸುಂದರನ್ | 500–00 |
| 65. | ಜಾನಕಿರಾಮ್ ಶ್ರೀನಿವಾಸ್‌ಮೂರ್ತಿ | 500–00 |
| 66. | ಜಿ. ಎಸ್. ಜಾನಕಿರಾಮ್ | 500–00 |
| 67. | ಬಿ. ಎಸ್. ರಂಗನಾಥ್ ಪ್ರಸಾದ್ | 500–00 |
| 68. | ಬಿ. ಎಸ್. ರಾಮೇಶ್ವರ್ ಪ್ರಸಾದ್ | 500–00 |
| 69. | ಕೆ. ಬಿ. ದಾಸ್ | 500–00 |
| 70. | ಎ. ವಿ. ನಳಿನಾ | 500–00 |
| 71. | ಎಸ್. ತ್ಯಾಗರಾಜನ್ | 500–00 |
| 72. | ಡಾ॥ ಜಿ. ಸ್ವಾಮಿನಾಥ್ | 500–00 |
| 73. | ಎ. ವಿ. ಮಂಜುನಾಥ್ | 500–00 |
| 74. | ಎ. ಎಮ್. ಸುಬ್ರಹ್ಮಣ್ಯಮ್ | 500–00 |
| 75. | ಶಿಲ್ಪಾ ಶ್ರೀನಿವಾಸ್ | 500–00 |
| 76. | ಟಿ. ಎಸ್. ರಾಮ್‌ಸ್ವರೂಪ್ | 500–00 |
| 77. | ಎಸ್. ಸಂತೋಷ್ | 500–00 |
| 78. | ಕೆ. ಜಿ. ಸೀತಾರಾಮ್ | 500–00 |
| 79. | ಡಾ॥ ಭಾನುಪ್ರಕಾಶ್ | 500–00 |
| 80. | ಎನ್. ನಾಗರಾಜ್ (ಕ.ನಗರ) | 500–00 |

## 'ಗುರುವಂದನೆ'ಗೆ ದೇಣಿಗೆ ನೀಡಿರುವ ಸದಸ್ಯರು

**ಶ್ರೀಯುತರುಗಳಾದ**

| | |
|---|---|
| ಜಿ. ಮುತ್ತುಸ್ವಾಮಿ | 5,000–00 |
| ಬಿ. ಎಸ್. ಸೂರ್ಯನಾರಾಯಣ್ | 5,000–00 |
| ಡಾ॥ ಜಿ. ಸ್ವಾಮಿನಾಥ್ | 4,000–00 |
| ವಿ. ಎಸ್. ಮಣಿ | 3,000–00 |
| ಆರ್. ವೆಂಕಟೇಶ್ ಪ್ರಸಾದ್ | 2,040–00 |
| ಅರುಣ್ ವೆಂಕಟಾಚಲಯ್ಯ | 2,040–00 |
| ಎಸ್. ಸೋಮಸುಂದರ್ | 2,000–00 |
| ಎ. ಎಮ್. ಸುಬ್ರಹ್ಮಣ್ಯಮ್ | 1,500–00 |
| ಆರ್. ಗಣೇಶ್ ಶ್ರೀಧರ್ | 1,040–00 |
| ಎಸ್. ಸಿ. ರಾಘವ ಪ್ರಸಾದ್ | 1,040–00 |
| ಎಚ್. ಕೆ. ಶಶಿಧರ್ | 1,040–00 |
| ಕೆ. ಎಸ್. ಅನಂತ | 1,040–00 |
| ಬಿ. ಆರ್. ಶಂಕರ್ ಪ್ರಸಾದ್ | 1,040–00 |
| ಎಸ್. ಸತ್ಯನಾರಾಯಣ್ | 1,040–00 |
| ಕೆ. ಮಂಜುನಾರಾಯಣ್ | 1,040–00 |
| ಕೆ.ಬಿ.ಎಸ್. ಮಣಿ | 1,040–00 |
| ಸರಸ್ವತಿ ನಟರಾಜ್ | 1,000–00 |
| ಎಸ್. ಸಿ. ಶ್ರೀನಿವಾಸ | 1,000–00 |
| ಎಸ್. ಪ್ರದೀಪ್ | 1,000–00 |
| ವಿ. ಸತೀಶ್ | 1,000–00 |
| ಶ್ರೀಧರ್ ಭಾನುಮೂರ್ತಿ | 1,000–00 |
| ರಘುಕುಮಾರ್ | 1,000–00 |
| ಡಾ॥ ಪ್ರವೀಣ್ | 1,000–00 |
| ಡಾ॥ ಪರಿಮಳ | 1,000–00 |
| ಬಿ. ಎನ್. ಜಿ. ಪ್ರಸಾದ್ | 1,000–00 |
| ಎನ್. ವಿ. ಸುಂದರ್ | 500–00 |
| ಎಮ್. ಆರ್. ಜಯರಾಮನ್ | 500–00 |
| ಜಿ. ಎಸ್. ಗೌರಮ್ಮ | 500–00 |
| ಎ. ಈಶ್ವರನ್ | 500–00 |

## ಸಂಘದ ಅಭಿನಂದನೆಗಳು

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ **ಡಾ॥ ಎಮ್. ಆರ್. ವಿ. ಪ್ರಸಾದ್** ಕೇಂದ್ರ **ಸಂಗೀತ ನಾಟಕ ಅಕಾಡೆಮಿಯ** ಸದಸ್ಯರಾಗಿ ನೇಮಕಗೊಂಡಿರುವ ಸಂದರ್ಭದಲ್ಲಿ ಸಂಘವು ಶ್ರೀಯುತರನ್ನು ಅಭಿನಂದಿಸುತ್ತದೆ.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಗೌರವ ಕಾರ್ಯದರ್ಶಿ **ಶ್ರೀ ರವಿಶಂಕರ್** ಅವರು ಹರಿಹರಪುರದಲ್ಲಿರುವ **ಶ್ರೀ ಶಂಕರಮಠದ ಆಡಳಿತಾಧಿಕಾರಿಯಾಗಿ** ನೇಮಕಗೊಂಡಿರುವುದಕ್ಕೆ ಬೃಹಚ್ಚರಣ ಸಂಘವು ಶ್ರೀಯುತರನ್ನು ಅಭಿನಂದಿಸುತ್ತದೆ.

## ಓದುಗರ ಪತ್ರಗಳು




**ಅಧ್ಯಕ್ಷ ಸೋಮಸುಂದರ್ ರವರಿಗೆ,**

11–9–2016ರಂದು ನಡೆದ M.M.D.B.S. 'ಗುರುವಂದನೆ' ಕಾರ್ಯಕ್ರಮವು, ಬಹಳ ಸಂಭ್ರಮದಿಂದ, ವ್ಯವಸ್ಥಿತವಾಗಿ ಅಚ್ಚುಕಟ್ಟಾಗಿ ನಡೆಯಿತು. ಅತಿಥಿಗಳ ಸ್ವಾಗತ, ನಿರೂಪಣೆ, ಸನ್ಮಾನ, ಎಲ್ಲ ಕಾರ್ಯಕ್ರಮಗಳು ಬಹಳ ಸುಲಲಿತವಾಗಿ ನಡೆಯಿತು. ನಮಗೆ ಸಮಯ ಹೋದದ್ದೇ ತಿಳಿಯಲಿಲ್ಲ. ನಂತರ ರುಚಿಕಟ್ಟಾದ ಊಟ, ವಿಶೇಷವಾಗಿ 'ಒರಳು ಚಿತ್ರಾನ್ನ' ತುಂಬಾ ರುಚಿಯಾಗಿತ್ತು. ಅಧ್ಯಕ್ಷರಿಗೂ, ಕಾರ್ಯಕಾರಿ ಸಮಿತಿಯವರಿಗೂ ಅನಂತ ಧನ್ಯವಾದಗಳು. ನಂತರ ಮನೆಗೆ ಹೋಗುವವರಿಗೆ ಪ್ರಸಾದ ಸಿಹಿ ಮತ್ತು ಖಾರದ ಪ್ಯಾಕೆಟ್‌ಗಳು. ಬಹಳ ಸುಂದರವಾದ ಕಾರ್ಯಕ್ರಮವಾಗಿ ರೂಪುಗೊಂಡಿತ್ತು. ಕಾರ್ಯಕ್ರಮ, ಅಚ್ಚುಕಟ್ಟಾಗಿ ನಡೆಯಿತು. ಅದರಲ್ಲಿ ಎರಡು ಮಾತಿಲ್ಲ.

9449730073 **ಗಾಯತ್ರಿ ಶೇಷಾಚಲ**

❖❖❖

ದಿನಾಂಕ 11–9–2016ರಂದು ಭಾನುವಾರ ಸಂಜೆ 4 ಗಂಟೆಗೆ ನಮ್ಮ 'ಮೈಸೂರು ಮಂಜಪತ್ತೂರು ದ್ರಾವಿಡ ಬೃಹಚ್ಚರಣ ಸಂಘ', 'ಗುರು ವಂದನೆ' ಕಾರ್ಯಕ್ರಮವನ್ನು ಆಚರಿಸಿತು. ಕಾರ್ಯಕ್ರಮವು ಅಚ್ಚುಕಟ್ಟಾಗಿ ನೆರವೇರಿತು. ಮುಖ್ಯ ಅತಿಥಿಗಳಾಗಿ ಶ್ರೀಯುತ ಕೆ.ಎನ್. ವೆಂಕಟ ನಾರಾಯಣ ಅಧ್ಯಕ್ಷರು, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮತ್ತು ಶ್ರೀಯುತ ಬಿ.ಎಸ್. ಸತ್ಯನಾರಾಯಣ ಕಾರ್ಪೋರೇಟರ್ ಹಾಗೂ ಮಾಜಿ ಮೇಯರ್, ಇವರು ಆಗಮಿಸಿ ಕಾರ್ಯಕ್ರಮವನ್ನು ನೆರವೇರಿಸಿಕೊಟ್ಟರು. 'ಪ್ರಾರ್ಥನೆ' ಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ನಂತರ ಸ್ವಾಗತ, ಸಂಘದ ಅಧ್ಯಕ್ಷರಿಂದ ಅತಿಥಿಗಳ ಪರಿಚಯ ನೆರವೇರಿತು. ಆನಂತರ ಕಾರ್ಯದರ್ಶಿ ವಿ.ಎಸ್. ಮಣಿಯವರು ಸಂಘದ ಎಲ್ಲಾ ಚಟುವಟಿಕೆಗಳನ್ನು ಹಾಗೂ ಕಾರ್ಯಕ್ರಮಗಳ ಪರಿಚಯವನ್ನು ಮಾಡಿಕೊಟ್ಟರು. ಆದರೆ 'ಬೃಹಚ್ಚರಣ' ತ್ರೈಮಾಸಿಕ ವಾರ್ತಾಪತ್ರ'ದ ಬಗ್ಗೆ ಪರಿಚಯವನ್ನು ಮಾಡಿಕೊಡಲಿಲ್ಲ. ಸಭೆಗೆ ಅನೇಕ ಹೊಸಬರೂ ಆಗಮಿಸಿದ್ದರಿಂದ ಹಾಗೂ ಈ ತ್ರೈಮಾಸಿಕ ಪತ್ರಿಕೆಯನ್ನು ಚಿಣ್ಣರಿಂದ ಹಿಡಿದು ಹಿರಿಯ ಚೇತನರವರೆಗೆ ಎಲ್ಲರೂ ಮೆಚ್ಚಿ ಓದುತ್ತಿರುವುದರಿಂದ, ಈ ಪುಸ್ತಕದ ಬಗ್ಗೆ ಒಂದು ಕಿರು ಪರಿಚಯ ಮಾಡಬಹುದಿತೆಂದು ನನ್ನ ಅನಿಸಿಕೆ. ನಂತರ 'ಗುರುವಂದನೆ ಗೌರವ ಸನ್ಮಾನ' ಅತಿಥಿಗಳ ಭಾಷಣ ವಂದನಾರ್ಪಣೆಯಲ್ಲೂ 'ಸಂಘದ ಕಾರ್ಯಕಾರಿ ಸಮಿತಿ'ಯ ಎಲ್ಲಾ ಸದಸ್ಯರು ಬಹಳ ಅಚ್ಚುಕಟ್ಟಾಗಿ ಅವರವರ ಕಾರ್ಯಗಳನ್ನು ಬಹಳ ಖುಷಿಯಿಂದ ನೆರವೇರಿಸಿದರು. ಆನಂತರ 'ಉಪಹಾರ' ನಡೆಯಿತು. ಒಟ್ಟಿನಲ್ಲಿ ಬಹಳ ಒಳ್ಳೆಯ ಕಾರ್ಯಕ್ರಮವಾಯಿತೆಂದು ನನ್ನ ಅನಿಸಿಕೆ.

**ಎಸ್.ಪಿ. ಸೂರ್ಯಕುಮಾರಿ**

❖❖❖

**ಗುರು ಬ್ರಹ್ಮ ಗುರು ವಿಷ್ಣು ಗುರುದೇವೋ ಮಹೇಶ್ವರಃ**
**ಗುರು ಸಾಕ್ಷಾತ್ ಪರ ಬ್ರಹ್ಮ ತಸ್ಮೈಶ್ರೀ ಗುರುವೇ ನಮಃ**

ನಮ್ಮ ಜೀವನದ ಮೊದಲ ಗುರು ತಾಯಿ. ಮನೆಯೇ ಮೊದಲ ಪಾಠಶಾಲೆ. ಆ ಮಮತಾಮಯಿ ತಾಯಿಗೆ, ಮೊದಲ ಗುರುವಿಗೆ ಭಕ್ತಿಯಿಂದ ಶ್ರದ್ಧೆಯಿಂದ ಮೊದಲು ನಮಿಸೋಣ. ನಾವೆಲ್ಲಾ ಒಂದು ಖಾಲಿ ಪುಸ್ತಕದ ರೀತಿ ಭೂಮಿಗೆ ಬರುತ್ತೇವೆ. ಇಲ್ಲಿ ಗುರು ಮುಖೇನ ವಿದ್ಯೆ ಕಲಿತು ಜೀವನದ ಪಾಠ ಕಲಿಯುತ್ತೇವೆ. ಗುರುವಿನಿಂದ ವಿದ್ಯೆಯ ಜೊತೆಗೆ ನಯ, ವಿನಯ, ಸಂಯಮ, ಹಿರಿಯರಿಗೆ ಗೌರವ, ಕಿರಿಯರಿಗೆ ಪ್ರೀತಿ, ಜೀವನದ ಸತ್ಯ–ಮಿಥ್ಯಗಳನ್ನು ಕಲಿತು ನಮ್ಮ ಗುರಿ ತಲುಪುತ್ತೇವೆ. ಅಡಿಪಾಯ ಇಲ್ಲದೆ ಕಟ್ಟಡ ಕಟ್ಟಲು ಹೇಗೆ ಸಾಧ್ಯವಿಲ್ಲವೋ ಅದೇ ರೀತಿ ಎಷ್ಟೇ ಸ್ವಂತ ಬುದ್ಧಿ ಇದ್ದರೂ ವಿದ್ಯೆ ಇಲ್ಲದೆ ಜೀವನದಲ್ಲಿ ಮುಂದುವರೆಯಲು ಸಾಧ್ಯವಿಲ್ಲ. ಅಂತಹ ಗುರುಗಳಿಗೆ (ಯಾವ ಗುರುವೇ ಆಗಲಿ ಪ್ರಾಥಮಿಕ, ಪ್ರೌಢಶಾಲೆ ಅಥವಾ ಕಾಲೇಜು ಇತ್ಯಾದಿ) ಗೌರವ ಸೂಚಿಸುವುದು ನಮ್ಮೆಲ್ಲರ ಕರ್ತವ್ಯ. ಇತ್ತೀಚೆಗೆ ಬೃಹಚ್ಚರಣ ಸಂಘದಲ್ಲಿ 'ಗುರುವಂದನೆ' ಕಾರ್ಯಕ್ರಮ ಹಮ್ಮಿಕೊಂಡಿದ್ದು ಬಹು ಹೆಮ್ಮೆಯ ವಿಷಯ. ಈ ಕೆಲಸವನ್ನು ನಮ್ಮ ಸಂಘದವರು ಅತ್ಯಂತ ಯಶಸ್ವಿಯಾಗಿ, ಅರ್ಥಪೂರ್ಣವಾಗಿ ನಡೆಸಿದ್ದಾರೆ. ನಮ್ಮ ಜನಾಂಗದವರೆಲ್ಲರೂ ಪ್ರೀತಿಯಿಂದ, ಶಿಸ್ತಿನಿಂದ ಹಾಗೂ ಗೌರವದಿಂದ ಭಾಗಿಗಳಾಗಿ ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದರು. ಎಲ್ಲರಿಗೂ ವಂದನೆಗಳು. ಕಾರ್ಯಕಾರಿ ಸಮಿತಿಯ ಸದಸ್ಯರೂ ಬಹು ಒಗ್ಗಟ್ಟಿನಿಂದ, ಕ್ರಮಬದ್ಧವಾಗಿ ಅವರವರಿಗೆ ಒಪ್ಪಿಸಿದ್ದ ಕೆಲಸಗಳನ್ನು ನಿರ್ವಹಿಸಿ ಸಮಾರಂಭದ ಯಶಸ್ಸಿಗೆ ಮುಖ್ಯ ಕಾರಣರಾದರು. ಇನ್ನು ಮುಂದೆಯೂ ಇಂತಹ ಕಾರ್ಯಕ್ರಮಗಳು ಸಂಘದಲ್ಲಿ ನಡೆದುಬರಲಿ ಎಂದು ನನ್ನ ಅನಿಸಿಕೆ.

**ಜಯಶ್ರೀ ಸೋಮಸುಂದರ**

❖❖❖

ದಿನಾಂಕ 11–9–16ರಂದು ತಮ್ಮ ಸಂಘದ ವತಿಯಿಂದ 'ಗುರು ವಂದನೆ' ಕಾರ್ಯಕ್ರಮವನ್ನು ಏರ್ಪಡಿಸಿ ಈ ಮೂಲಕ ನಮ್ಮ ಜನಾಂಗದ ಎಲ್ಲ ನಿವೃತ್ತ ಶಿಕ್ಷಕರನ್ನು ಸನ್ಮಾನಿಸಿ ಗೌರವಿಸಿದ್ದೀರಿ. ಈ ಸನ್ಮಾನ ಸಮಾರಂಭದಲ್ಲಿ ನಾವೂ ಭಾಗಿಗಳಾಗಿದ್ದೆವು. ಈ ಕಾರ್ಯಕ್ರಮ ಬಹಳ ಚೆನ್ನಾಗಿ ಜರುಗಿತು. ಇತರ ಸಂಘಗಳಿಗೂ ಇದು ಮಾದರಿಯಾಗಿರಲಿ ಎಂದು ಆಶಿಸಿ ನಮ್ಮ ವಂದನೆಗಳನ್ನು ಈ ಮೂಲಕ ಸಂಘದ ಎಲ್ಲ ಪದಾಧಿಕಾರಿಗಳಿಗೂ ಹಾಗೂ ಸದಸ್ಯರಿಗೂ ತಿಳಿಸಲು ಇಚ್ಛಿಸುತ್ತೇವೆ. ಹಾಗೂ ನಾವೂ ಆಭಾರಿಯಾಗಿದ್ದೇವೆ.

**ಕೆ. ಭಾರತಿ ಅನಂತರಾಂ**
**ಕೆ. ಗೀತ**

Book-Post

To,

______________________

______________________

______________________

*If undelivered please return to :*
*President*
**'Brihacharana Sangha'** No. 8, 3rd Cross, Annaiyyappa Block, Kumarapark West, Bengaluru-560 020.

Published by Sri S. Somasundara, President, 'BRIHACHARANA SANGHA' No. 8, 3rd Cross, Annaiyyappa Block, Kumarapark West, Bengaluru-560 020.
Printed at **Ila Mudrana,** No. 36, 40Ft. Road, Raghavanagar, NTY Layout, Bengaluru-560 026. Ph : 26757159, E-mail: ilaprinters@gmail.com